ಜನಪದ ವಿಚಾರ


ಬೆಲೆ : ರೂ ೧೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೫ ಡಿಸೆಂಬರ್ - ೨೦೧೪ ಸಂಚಿಕೆ - ೦೫



ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ಪುನರಾವಲೋಕನ ಸಮಿತಿ ತನ್ನ ವರದಿಯನ್ನು ಮುಖ್ಯಮಂತ್ರಿಗಳಿಗೆ ಸಲ್ಲಿಸುತ್ತಿದೆ

ಪಂಚಾಯತ್ ರಾಜ್ಯ ಬೇಕೆ?
ಗ್ರಾಮ ರಾಜ್ಯ ಬೇಕೆ?

ಜನಪದ ವಿಚಾರದಲ್ಲಿ

ಡಿಸೆಂಬರ್ – ೨೦೧೪

೧) ಪಂಚಾಯತ್ ರಾಜ್ಯ ಬೇಕೆ?ಗ್ರಾಮ ರಾಜ್ಯ ಬೇಕೆ?

– ಸುರೇಂದ್ರ ಕೌಲಗಿ

ಸಧ್ಯದ ಪಂಚಾಯತ್ ರಾಜ್ಯ ವ್ಯವಸ್ಥೆಯು ಗ್ರಾಮ ರಾಜ್ಯದ ಕಲ್ಪನೆ ಸಾಕಾರಗೊಳ್ಳುವಂತೆ ಮಾಡಲಿದೆ ಎಂಬುದಾಗಿ ಕೆ.ಆರ್.ರಮೇಶ್‌ಕುಮಾರ್ ವರದಿಯ ಆಶಯವಾಗಿದೆ. ಆದರೆ ಅವರ ವರದಿಯಲ್ಲಿ ಗ್ರಾಮ ರಾಜ್ಯಕ್ಕೆ ಅಗತ್ಯವಾದ ತಿರುಳೇ ಇಲ್ಲ. ಇತ್ಯಾದಿ ಸಂಗತಿಗಳನ್ನು ಈ ಲೇಖನ ಪ್ರಸ್ತಾಪಿಸುತ್ತದೆ.

೨) ಚಲನಶೀಲತೆ

– ಡಾ.ಬೋರೇಗೌಡ ಚಿಕ್ಕಮರಳಿ

ವಿಘಟನಾ ರಹಿತ ಸಮಾಜ ಸ್ಥಾಪಿಸುವುದು ಚಲನಶೀಲ ಮಾನವನ ಜೀವನದ ಗುರಿಯಾಗಬೇಕು ಆಗ ಮಾತ್ರ ಅಚ್ಛಿನ್ನ ಸಂತೃಪ್ತಿ, ಆಪ್ಯಾಯಮಾನತೆ ಮಾನವ ಸಮಾಜದಲ್ಲಿ ನೆಲೆಸುತ್ತದೆ ಎಂಬ ವಿಚಾರ ಪುಷ್ಟೀಕರಿಸುತ್ತದೆ ಈ ಲೇಖನ.

೩) ಸುಸ್ಥಿರ ಅಭಿವೃದ್ಧಿ

– ಪ್ರೊ. ಬಿ.ಎಂ. ಕುಮಾರಸ್ವಾಮಿ

ಭಾರತೀಯ ಅಭಿವೃದ್ಧಿ ಮಾದರಿಯ ಗುರಿ ಹೇಗಿರಬೇಕು ಎಂಬುದನ್ನು ಈ ಲೇಖನ ವಿವರಿಸುತ್ತದೆ.

೪) ಯಂತ್ರಗಳು ಆತ್ಮಸಾಕ್ಷಿಯನ್ನು ಮೊಂಡಾಗಿಸುತ್ತವೆ

– ಎಸ್. ಮಂಜುನಾಥ್

ಮಾನವನ ಸೇವಕನಾಗಬೇಕಿದ್ದ ಯಂತ್ರಗಳಿಗೆ ಮಾನವ ಹೇಗೆ ಸೇವಕನಾಗಿದ್ದಾನೆ ಎಂಬುದನ್ನು ತಿಳಿಯಲು ಈ ಲೇಖನ ಓದಿ.

೫) ದೇಶದ ಪ್ರತಿಷ್ಠಿತರ ಚಿಂತನೆ ಎತ್ತ ಸಾಗಿದೆ?

– ಸುರೇಂದ್ರ ಕೌಲಗಿ

ದೇಶದ ಕೆನೆಪದರಿನ ಬಹು ಪ್ರತಿಷ್ಠಿತ ಐದು ಮಹಾನುಭಾವರ ವಿಚಾರಗಳು, ಆ ಬಗ್ಗೆ ಟಿಪ್ಪಣಿಗಳು ಇಲ್ಲಿ ಪ್ರಸ್ತುತ.

೬) ಆಧುನಿಕತೆ : ಮಿಂಚಿದ ವಿಚಾರಗಳು

ಕಳೆದ ಅಕ್ಟೋಬರ್ ೧೯ ಮತ್ತು ೨೦ರಂದು ಕುಪ್ಪಳ್ಳಿಯಲ್ಲಿ ಆಧುನಿಕತೆ ಬಗ್ಗೆ ನಡೆದ ಅಧ್ಯಯನ ಶಿಬಿರದಲ್ಲಿ ಮಿಂಚಿದ ವಿಚಾರಗಳು ಇಲ್ಲಿವೆ.

೭) ಜನಪದ ನಿಲಯದ ಅಂತರಂಗದಲ್ಲಿ – ೧೨೮

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಡಿಸೆಂಬರ್ – ೨೦೧೪
ಸಂಪುಟ – ೧೫
ಸಂಚಿಕೆ – ೦೫

ಸಂಪಾದಕ
ಸುರೇಂದ್ರ ಕೌಲಗಿ

ಚಂದಾ ವಿವರ
ವಾರ್ಷಿಕ : ರೂ ೧೦೦/–
ಬಿಡಿ ಸಂಚಿಕೆ : ರೂ ೧೦/–

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ – 571431
ಮಂಡ್ಯ ಜಿಲ್ಲೆ

ಫೋನ್ : 08236 – 316344
08236 – 299854
email :
janapada@yahoo.com
Web: janapada.net

ನನ್ನದೇನೂ ಇಲ್ಲ !

ದೇವಾ! ಈ ಸೃಷ್ಟಿ ನಿನ್ನದು
ದೃಷ್ಟಿ ಮಾತ್ರ ನನ್ನದು, ಅದು ನಿನ್ನ ಕೃಪೆ !
ನಿನ್ನ ಸೃಷ್ಟಿಯ ನೋಡಿ ನೋಡಿ
ನನ್ನ ದೃಷ್ಟಿ ಸೋತಿತು–ಕೊನೆಗೆ ಅಳಿಯಿತು;
ನಿನ್ನ ಸೃಷ್ಟಿ ಮಾತ್ರ
ಎಂದಿನಂತೆ ಉಳಿಯಿತು !

ದೇವಾ ! ಈ ದೂರ ನಿನ್ನದು
ಕಾಲು ಮಾತ್ರ ನನ್ನದು;ಅದುನಿನ್ನ ಕೊಡುಗೆ!
ನಿನ್ನ ದೂರವ ಸವೆಸಲೆಂದು
ನನ್ನ ಕಾಲು ನಡೆದೇ ನಡೆಯಿತು–
ಕೊನೆಗೆ ಸೋತಿತು–ನಿಂತಿತು;
ನಿನ್ನ ದೂರ ಮಾತ್ರ
ಎಂದಿನಂತೆ ಉಳಿಯಿತು !

ದೇವಾ ! ಈ ಜಗವು ನಿನ್ನದು
ಜಾಗ ಮಾತ್ರ ನನ್ನದು; ಅದು ನನ್ನ ಹುಚ್ಚು!
ನಿನ್ನ ಜಗವ ಅಳೆದಳೆದು
ಜಾಗ ಮಾಡಿ ನಾಸೊತೆ–ಸುಮ್ಮನಾದೆ;
ನಿನ್ನ ಜಗವು ಮಾತ್ರ
ಎಂದಿನಂತೆ ಉಳಿಯಿತು !

ದೇವಾ ! ಜ್ಞಾನ ಸಾಗರ ನಿನ್ನದು
ಬುದ್ಧಿ ಮಾತ್ರ ನನ್ನದು;
ಅದು ನಿನ್ನ ಮಾಹಾಕೃಪೆ !
ನಿನ್ನ ಜ್ಞಾನ ಸಾಗರವನು
ನನ್ನ ಬುದ್ಧಿಯ ಬಟ್ಟಲಿಂದ
ಅಳೆದು ಅಳೆದು ಹಣ್ಣಾದೆ–ತೆಪ್ಪಗಾದೆ;
ನಿನ್ನ ಜ್ಞಾನ ಸಾಗರ ಮಾತ್ರ
ಎಂದಿನಂತೆ ಉಳಿಯಿತು
ಆಗ ನನಗೆ ಅರಿವಾಯಿತು ದೇವಾ
ನನ್ನದು ಅಲ್ಲವಲ್ಲ;
"ನನ್ನದೇನೂ ಇಲ್ಲ" ಎಂದು !

– ಎಲ್ಲೆನ್ ತೊಂಡೊಟಿ

ಚಿಂತನೆಗೊಂದು ಸಂಗತಿ

ಇತ್ತೀಚೆಗೆ ಛತ್ತೀಸ್‌ಗಢದಲ್ಲಿ ಸಂತಾನಹರಣ ಚಿಕಿತ್ಸಾ ಕೇಂದ್ರದಲ್ಲಿ ಶಸ್ತ್ರ ಚಿಕಿತ್ಸೆಗೆ ಒಳಗಾಗಿ ಹದಿನೈದು ಜನ ಮಹಿಳೆಯರು ತೀರಿಕೊಂಡಿರುವುದು ಬಹಳ ಆಘಾತಕಾರಿ ಮತ್ತು ದುಃಖದ ಸಂಗತಿ. ಈ ದುರಂತಕ್ಕೆ ಕೇವಲ ವೈದ್ಯರಷ್ಟೇ ಕಾರಣರಾಗಿಲ್ಲ ಆಸ್ಪತ್ರೆಯ ಸುಸ್ಥಿತಿಯಲ್ಲಿ ಇರದ ಶಸ್ತ್ರಚಿಕಿತ್ಸಾ ಉಪಕರಣಗಳು ಮತ್ತು ಸರ್ಕಾರದಿಂದ ಪೂರೈಕೆಯಾದ ಕಳಪೆ ಮತ್ತು ನಕಲಿ ಔಷಧಿಗಳ ಉಪಯೋಗವೂ ಕೂಡ ಕಾರಣವಾಗಿವೆ. ಈ ದುರಂತಕ್ಕೆ ಒಬ್ಬ ವೈದ್ಯ ಅಲ್ಲ, ಹಲವಾರು ವೈದ್ಯರು ಕಾರಣರಾಗಿದ್ದಾರೆ. ಈ ಘಟನೆ ವಿಶ್ವ ಆರೋಗ್ಯ ಸಂಸ್ಥೆಯ ಗಮನಕ್ಕೂ ಹೋಗಿದೆ. ಇದು ಅಂತರರಾಷ್ಟ್ರೀಯ ಸುದ್ದಿಯಾಯಿತು. ಭಾರತದಲ್ಲಿರುವ ವೈದ್ಯಕೀಯ ಸೇವೆಯ ದಕ್ಷತೆಯ ಬಗ್ಗೆ ಸಾರ್ವತ್ರಿಕವಾಗಿ ಅಪನಂಬಿಕೆ ಉಂಟಾಗುವಂತೆ ಮಾಡಿತು. ದೇಶದ ತುಂಬಾ ಸ್ಪೆಷಾಲಿಟಿ, ಸುಪರ್ ಸ್ಪೆಷಾಲಿಟಿ ಆಸ್ಪತ್ರೆಗಳು ತಲೆ ಎತ್ತುತ್ತಿರುವ ಸಮಯದಲ್ಲಿ ಛತ್ತೀಸ್‌ಗಢದಲ್ಲಿಯಂಥ ದುರ್ಘಟನೆಗಳು ನಡೆಯುತ್ತಿರುವುದು ವಿರೋಧಾಭಾಸದ ಸಂಗತಿಯಾಗಿದೆ. ವೈದ್ಯಕೀಯ ಸೇವೆಗಳ ಬಗ್ಗೆ ಮತ್ತು ಔಷಧಿಗಳ ಬಗ್ಗೆ ಹಾಗೂ ವೈದ್ಯರ ಬಗ್ಗೆ ಇರಬೇಕಾದ ಜನರ ವಿಶ್ವಾಸ ಕಳೆದು ಹೋಗುತ್ತಿದೆ. ಒಂದು ವೇಳೆ ಎಬೊಲಾದಂಥ ಭಯಂಕರವಾದ ರೋಗವೇನಾದರೂ ಸಾಂಕ್ರಾಮಿಕವಾಗಿ ಹಬ್ಬಿದಲ್ಲಿ ನಮ್ಮೀ ಆಸ್ಪತ್ರೆಗಳು ಮತ್ತು ವೈದ್ಯರು ನಿಜವಾಗಿಯೂ ಜನರನ್ನು ರಕ್ಷಿಸಬಲ್ಲರೆ ಎಂಬ ಭಯ ಮನಸ್ಸಿನಲ್ಲಿ ಮೂಡುತ್ತದೆ. ಈಗಾಗಲೇ ಎಬೊಲಾ ಭಾರತ ಪ್ರವೇಶಿಸಿದೆ. ಆಫ್ರಿಕಾದ ಅನೇಕ ದೇಶಗಳಲ್ಲಿ ಇದು ಹರಡಿದೆ. ಇದುವರೆಗೆ ಐದು ಸಾವಿರ ಜನರು ಎಬೊಲಾದಿಂದ ಅಸುನೀಗಿದ್ದಾರೆ. ಇದೊಂದು ಭಯಂಕರವಾದ ಸಾಂಕ್ರಾಮಿಕ ರೋಗ. ಈ ರೋಗವನ್ನು ಅಂಟಿಸಿಕೊಂಡ ವ್ಯಕ್ತಿ ಬಹು ಬೇಗ ಮರಣಕ್ಕೀಡಾಗುತ್ತಾನೆ. ಇಂಥ ಮಹಾಮಾರಿಯಿಂದ ಜನರನ್ನು ರಕ್ಷಿಸುವ ವೈದ್ಯಕೀಯ ವ್ಯವಸ್ಥೆ ನಮ್ಮಲ್ಲಿದೆಯೇ ಎಂಬ ಬಗ್ಗೆ ಎಲ್ಲರೂ ಸರ್ಕಾರವನ್ನು ಕೇಳಬೇಕು. ಇನ್ನೊಂದು ದುರ್ದೈವದ ಮಾತೆನೆಂದರೆ ದೇಶದಲ್ಲಿ ಆಗುವ ವಿವಿಧ ಪ್ರಕಾರದ ದುರಂತಗಳಲ್ಲಿ ಮಹಿಳೆಯರು ಮತ್ತು ಮಕ್ಕಳೇ ಪ್ರಪ್ರಥಮವಾಗಿ ಬಲಿಯಾಗುವುದು. ಮಕ್ಕಳು ಮತ್ತು ಮಹಿಳೆಯರು ಬಲಿಯಾಗುತ್ತಿರುವ ಕ್ಷೇತ್ರ ಮತ್ತು ಸಂದರ್ಭಗಳು ಹೆಚ್ಚಾಗುತ್ತಿವೆ. ನೈಜೀರಿಯಾದಲ್ಲಿ ಇಸ್ಲಾಮಿಕ್ ಭಯೋತ್ಪಾದಕರು ಇನ್ನೂರು ಶಾಲಾ ವಿದ್ಯಾರ್ಥಿನಿಯರನ್ನು ಅಪಹರಿಸಿ, ಅವರನ್ನು ಇಸ್ಲಾಂ ಧರ್ಮಕ್ಕೆ ಮತಾಂತರಗೊಳಿಸಿ ಅವರನ್ನು ಭಯೋತ್ಪಾದಕರು ಮದುವೆ ಮಾಡಿಕೊಂಡಿದ್ದನ್ನು ಕೇಳಿದ್ದೇವೆ. ಇಂಥ ಹಲವು ಬಗೆಯ ದುರ್ಘಟನೆಗಳಿಗೆ ಮಕ್ಕಳು ಮತ್ತು ಮಹಿಳೆಯರು ಹೆಚ್ಚು ಹೆಚ್ಚಾಗಿ ಬಲಿಯಾಗುತ್ತಿರುವ ಬಗ್ಗೆ ನಾಗರೀಕ ಸಮಾಜ ಎಚ್ಚೆತ್ತುಕೊಳ್ಳಬೇಕು. ಸರ್ಕಾರದ ಪಾತ್ರಕ್ಕಿಂತಲೂ ಶಿಕ್ಷಿತರ, ಚಿಂತಕರ ಮತ್ತು ಪತ್ರಿಕೆಗಳ ಪಾತ್ರ ಹಿರಿದಾಗಿದೆ.



ಪಂಚಾಯತ್ ರಾಜ್ಯ ಬೇಕೆ?
ಗ್ರಾಮ ರಾಜ್ಯ ಬೇಕೆ?

– ಸುರೇಂದ್ರ ಕೌಲಗಿ

ಪಂಚಾಯತ್ ರಾಜ್ಯದ ಮೂಲಕ ಗ್ರಾಮ ರಾಜ್ಯ, ಗ್ರಾಮ ರಾಜ್ಯದ ಮೂಲಕ ರಾಮ ರಾಜ್ಯ ಪ್ರತಿಷ್ಠಿತವಾಗಬೇಕೆಂಬುದು ಮಹಾತ್ಮಗಾಂಧೀಜಿಯವರ ಆಶಯವಾಗಿತ್ತು, ಆದರೆ ಇದುವರೆಗಿದ್ದ ಪಂಚಾಯತ್ ರಾಜ್ಯ ವ್ಯವಸ್ಥೆ ಮತ್ತು ರಮೇಶ್‌ಕುಮಾರ್‌ರವರ ಸಮಿತಿ ಶಿಫಾರಸ್ಸಿನ ಮೇರೆಗೆ ರಚಿತವಾಗಬಹುದಾದ ಪಂಚಾಯತ್ ರಾಜ್ಯ ವ್ಯವಸ್ಥೆ ಖಂಡಿತವಾಗಿಯೂ ಗ್ರಾಮ ರಾಜ್ಯದತ್ತ ಒಯ್ಯಲಾರದು. ಏಕೆಂದರೆ ಇಂದಿನ ಪಂಚಾಯತ್ ರಾಜ್ಯ ರಾಜಕಾರಣ ಪ್ರಣೀತವಾಗಿದೆ. ಎಲ್ಲ ನಿರ್ಧಾರಗಳು ಬಹು ಮತ – ಅಲ್ಪ ಮತದಿಂದ ತೀರ್ಮಾನವಾಗುವವು. ಈ ಪದ್ಧತಿಯಿಂದ ಗ್ರಾಮ ಸಮುದಾಯ ಒಡೆಯುವುದು. ರಾವಣನ ರಾಜ್ಯಕ್ಕೆ ಕಾರಣವಾಗುವುದು. ಇದಕ್ಕೆ ತದ್ವಿರುದ್ಧವಾಗಿ ಗ್ರಾಮ ರಾಜ್ಯದಲ್ಲಿ ಎಲ್ಲವೂ ಸರ್ವಾನುಮತದಿಂದ ನಡೆಯುವುದು. ಈ ಪದ್ಧತಿಯಿಂದ ಗ್ರಾಮ ಒಂದು ಅಖಂಡ ಸಮಾಜವಾಗಿ ರೂಪುಗೊಳ್ಳುವುದು. ಅದು ರಾಮರಾಜ್ಯಕ್ಕೆ ಕಾರಣವಾಗುವುದು. ಅಸತ್‌ನಿಂದ ಸತ್ಯದ ಕಡೆಗೆ ಕತ್ತಲೆಯಿಂದ ಬೆಳಕಿನಕಡೆಗೆ ಮೃತ್ಯುವಿನಿಂದ ಅಮೃತತ್ವದ ಕಡೆಗೆ ಒಯ್ಯುವ ರಾಜ್ಯವಾಗುತ್ತದೆ. ಈಗ ಸರ್ಕಾರ ಕರ್ನಾಟಕಕ್ಕೆ ಪಂಚಾಯತ್ ರಾಜ್ಯ ಬೇಕೆ? ಅಥವಾ ರಾಮ ರಾಜ್ಯದತ್ತ ಒಯ್ಯುವ ಗ್ರಾಮ ರಾಜ್ಯ ಬೇಕೆ? ಎಂಬುದನ್ನು ತೀರ್ಮಾನಿಸಬೇಕು. ಕರ್ನಾಟಕದಲ್ಲಿ ಈಗ ಇರುವ ಪಂಚಾಯತ್ ರಾಜ್ ಕಾಯ್ದೆಗೆ ಕಾಯಕಲ್ಪ ಕೊಡಲು ಶಾಸಕ ಕೆ.ಆರ್.ರಮೇಶ್ ಕುಮಾರ್‌ರವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಗಿತ್ತು. ಆ ಸಮಿತಿಯು ಕಾಯ್ದೆಗೆ ತಿದ್ದುಪಡಿ ಮಾಡುವುದಕ್ಕಾಗಿ ಅನೇಕ ಶಿಫಾರಸ್ಸುಗಳನ್ನು ಮಾಡಿದೆ. ಸಮಿತಿಯ ಶಿಫಾರಸ್ಸಿನ ಮೇರೆಗೆ ರಚಿತವಾಗುವ ಹೊಸ ಪಂಚಾಯತ್ ರಾಜ್ ಸಂಸ್ಥೆಗಳು ತಮ್ಮ ಸಮರ್ಥ ಆಳ್ವಿಕೆಯಿಂದ ಗ್ರಾಮಗಳಲ್ಲಿ 'ಗ್ರಾಮ ರಾಜ್ಯವನ್ನು' ಸ್ಥಾಪಿಸಲು ಸಾಧ್ಯವಾಗುವುದೆಂಬ ಅಪೇಕ್ಷೆಯನ್ನು ಕೆ.ಆರ್.ರಮೇಶ್

ಕುಮಾರ್ ಇರಿಸಿಕೊಂಡಂತಿದೆ. ಪ್ರಭುತ್ವವೇ ಇಲ್ಲದಂತಾಗುವ ಸ್ಥಿತಿ ಉಂಟಾಗುವ ಕಾಲ ಬರುತ್ತದೆಂದು ಕಮ್ಯುನಿಷ್ಟ ನಾಯಕ ಕಾರ್ಲ್‌ಮಾರ್ಕ್ಸ್ ಹೇಳಿದ್ದ ಆದರೆ ಅಂಥ ಪ್ರಭುತ್ವ ರಹಿತ ಸಮಾಜ ವ್ಯವಸ್ಥೆ ಈವರೆಗೂ ಎಲ್ಲಿಯೂ ಉಂಟಾಗಿಲ್ಲ. ಬದಲಿಗೆ ಜಗತ್ತಿನ ಎಲ್ಲ ದೇಶಗಳಲ್ಲಿಯ ಪ್ರಭುತ್ವಗಳು ಹೆಚ್ಚು ಹೆಚ್ಚು ಗಟ್ಟಿಗೊಳ್ಳುತ್ತಾ ಹೋಗುತ್ತಿವೆ. ತಮ್ಮ ದೇಶದ ಜನತೆಯನ್ನು ಹೆಚ್ಚು ಹೆಚ್ಚು ಪರಾವಲಂಬಿಗೊಳಿಸುತ್ತಿವೆ. ತತ್‌ಪರಿಣಾಮವಾಗಿ ಆಡಳಿತ ಗರಿಷ್ಟ ಪ್ರಮಾಣಕ್ಕೆ ಹೋಗಿ ಸರ್ಕಾರ ಕನಿಷ್ಟ ಪ್ರಮಾಣಕ್ಕೆ ಇಳಿಯುತ್ತಿಲ್ಲ. ಕರ್ನಾಟಕ ರಾಜ್ಯದಲ್ಲಿ ೧೯೮೫ರಲ್ಲಿ ಪಂಚಾಯತ್ ರಾಜ್ಯ ಕಾಯ್ದೆ ಅನುಷ್ಟಾನಕ್ಕೆ ಬಂದಿತು. ಅದಕ್ಕೆ ೨೦ ವರ್ಷಗಳಾದವು. ೨೦ ವರ್ಷಗಳ ಅವಧಿಯಲ್ಲಿ ಗ್ರಾಮ ಪಂಚಾಯಿತಿಗಳು ವಿಕೇಂದ್ರೀಕೃತ ಆಡಳಿತ ವ್ಯವಸ್ಥೆ ಬಲಗೊಳ್ಳುವಂತೆ ಯಾವುದೇ ಕಾಣಿಕೆಯನ್ನು ಸಲ್ಲಿಸಿದ ಗುರುತು ಕಾಣುತ್ತಿಲ್ಲ. ಬದಲಿಗೆ ಅವು ಸ್ವಾರ್ಥ ರಾಜಕಾರಣದ ತಾಣಗಳಾಗಿ ರೂಪಗೊಂಡು ಸ್ಥಿರವಾಗಿವೆ. ರಾಜಕೀಯ ಪಕ್ಷಗಳು ತೆರೆಯ ಮರೆಯಲ್ಲಿ ಇದ್ದುಕೊಂಡೇ ಪಂಚಾಯತ್ ರಾಜ್‌ವ್ಯವಸ್ಥೆಯನ್ನು ಬುಡಮೇಲು ಮಾಡಿವೆ. ರಾಜಕೀಯ ಮಹತ್ವಾಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಅದು ಒಂದು ಮಾರ್ಗವೆಂದು ಭಾವಿಸಲಾಗಿದೆ. ಅದರಿಂದಾಗಿ ಜನತೆಯಲ್ಲಿ ವಿಕೇಂದ್ರೀಕೃತ ಆಡಳಿತದ ಹಿಂದಿರುವ ಸದುದ್ದೇಶ ಅದಕ್ಕೆ ಬೇಕಾದ ನೈತಿಕ ಶಿಕ್ಷಣ ಮತ್ತು ಸ್ವಾವಲಂಬನೆಯ ಭಾವನೆ ಮುರುಟುಗೊಂಡವು. ಅವುಗಳ ಸ್ಥಾನದಲ್ಲಿ ರಾಜಕೀಯ ನೇತೃತ್ವ, ಸರ್ಕಾರದ ಮೇಲೆ ಗರಿಷ್ಟ ಅವಲಂಬನೆ ಮತ್ತು ಭ್ರಷ್ಟಾಚಾರ ಆ ಸ್ಥಳವನ್ನು ಆಕ್ರಮಿಸಿಕೊಂಡವು. ಎಲ್ಲ ವಿಧದಲ್ಲೂ ಕೆಟ್ಟು ಹೋಗಿರುವ ಪಂಚಾಯತ್ ರಾಜ್ಯ ಸಂಸ್ಥೆಗಳನ್ನು ಸರಿಪಡಿಸಿ ಅವು ಜನರ ಆಶೋತ್ತರಗಳನ್ನು ನೆರವೇರಿಸುವುದಕ್ಕೆ ಸಮರ್ಥ ಸಂಸ್ಥೆಗಳನ್ನಾಗಿ ಮಾಡುವ ಉದ್ದೇಶದಿಂದ ರಾಜ್ಯ ಸರ್ಕಾರವು ಶಾಸಕ ಕೆ.ಆರ್.ರಮೇಶ್ ಕುಮಾರ್ ಅಧ್ಯಕ್ಷತೆಯಲ್ಲಿ ಸುಮಾರು ೨೨ ಜನರಿರುವ ಸಮಿತಿಯನ್ನು ರಚಿಸಿತು. ಆ ಸಮಿತಿ ಇಂದಿನ ಪಂಚಾಯತ್ ರಾಜ್ಯ ವ್ಯವಸ್ಥೆಯನ್ನು ಮತ್ತು ಅದರ ಸೋಲು-ಗೆಲುವುಗಳನ್ನು ಅಧ್ಯಯನ ಮಾಡಿ ಅದಕ್ಕೆ ಹೊಸ ಕಾಯಕಲ್ಪ ಕೊಡಲು ಅನೇಕ ಶಿಫಾರಸ್ಸುಗಳನ್ನು ಸರ್ಕಾರಕ್ಕೆ ಮಾಡಿದೆ. ೨೦೧೫ರ ಮೇ ತಿಂಗಳಲ್ಲಿ ಗ್ರಾಮ ಪಂಚಾಯಿತಿ ಚುನಾವಣೆ ನಡೆಯಲೇ ಬೇಕಾಗಿರುವುದರಿಂದ ಅಷ್ಟರೊಳಗಾಗಿ ಪರಿಷ್ಕೃತ ಹೊಸ ಪಂಚಾಯತ್ ಕಾನೂನನ್ನು ಜಾರಿಗೆ ತರಲು ಸರ್ಕಾರ ಪ್ರಯತ್ನಿಸುತ್ತಿದೆ. ರಮೇಶ್ ಕುಮಾರ್‌ರವರ ವರದಿ ರೂಪುಗೊಳ್ಳುತ್ತಿದ್ದ ಸಂದರ್ಭದಲ್ಲಿ ಅಲ್ಲಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಬಗ್ಗೆ ಕೇಳಿಬಂದ ಮಾತುಗಳನ್ನು ಗಮನಿಸಿದರೆ ಈ ಮೂವತ್ತು ವರ್ಷದ ಅವಧಿಯಲ್ಲಿ ಗ್ರಾಮ ಪಂಚಾಯತ್ ರಾಜ್ಯ ವ್ಯವಸ್ಥೆ ಎಷ್ಟು ನಿರರ್ಥಕವು ಮತ್ತು ಕೇವಲ ನಾಟಕೀಯತೆಯಿಂದ ಕೂಡಿದವುಗಳು ಆಗಿದ್ದವೆಂಬುದು ಗೊತ್ತಾಗುತ್ತದೆ. ಕೇಳಿಬಂದ ಅಭಿಪ್ರಾಯಗಳಲ್ಲಿ ಕೆಲವನ್ನು ಈ ಕೆಳಗೆ ಕೊಡಲಾಗಿದೆ.

೧. ಪಂಚಾಯತ್ ರಾಜ್ಯ ಸಂಸ್ಥೆಯೊಳಗೆ ಅಧಿಕಾರವಿದೆ ಎಂಬುದು ಕನ್ನಡಿಯೊಳಗಿನ ಗಂಟು. ಗ್ರಾಮವೊಂದು ತನ್ನ ನೈಸರ್ಗಿಕ ಸಂಪನ್ಮೂಲಗಳನ್ನು ಕಾಪಾಡಿಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ಕೋಲಾರ ಜಿಲ್ಲೆಯ ಘಟನೆಯೊಂದು ಸಾಬೀತುಮಾಡುತ್ತಿದೆ. ಅಗರವೆಂಬ ಗ್ರಾಮಪಂಚಾಯಿತಿಯು ಅರಣ್ಯ ಇಲಾಖೆಯ ನೀಲಗಿರಿ ನೆಡುವ ಕಾರ್ಯಕ್ರಮವನ್ನು ವಿರೋಧಿಸಿ ನಿರ್ಣಯ ಕೈಗೊಂಡಿದೆ. ಆದರೆ ಅರಣ್ಯ ಇಲಾಖೆ

ಆ ನಿರ್ಣಯಕ್ಕೆ ಯಾವ ಬೆಲೆಯನ್ನೂ ಕೊಡುತ್ತಿಲ್ಲ.

೨. ಅಧಿಕಾರಿಗಳಿಂದ ಶಾಸಕರಿಗಾಗಿ ಯೋಜನೆಗಳು ಸಿದ್ಧವಾಗುತ್ತಿವೆಯೇ ಹೊರತು ಜನರಿಂದ ಜನರಿಗಾಗಿ ಯೋಜನೆಗಳು ಸಿದ್ಧವಾಗುತ್ತಿಲ್ಲ. ಯೋಜನೆಗಳನ್ನು ರೂಪಿಸುವ ಪ್ರಕ್ರಿಯೆ ಕೆಳಗಿನಿಂದ ಮೇಲಕ್ಕೆ ಸಾಗಬೇಕು ಎಂಬ ಆಶಯದೊಂದಿಗೆ ಸಂವಿದಾನದ ತಿದ್ದುಪಡಿಯಾಗಿದೆ. ಪ್ರತಿಯೊಂದು ಜಿಲ್ಲೆಗೆ ಯೋಜನಾ ಸಮಿತಿ ಇರಬೇಕು. ಅದರಲ್ಲಿ ಸ್ಥಳೀಯ ಸರ್ಕಾರಗಳ ಸದಸ್ಯರಿರಬೇಕು. ಅವರ ಮೂಲಕ ರಾಜ್ಯ ಮಟ್ಟದಲ್ಲಿ ಯೋಜನೆ ರೂಪಗೊಳ್ಳಬೇಕು ಎಂಬುದು ಆಶಯ. ಆದರೆ ಈಗ ಅವು ಶಾಸಕರ ಅನುಕೂಲಕ್ಕೆ ತಕ್ಕಂತೆ ರೂಪಿಸುವ ಯೋಜನೆ ಆಗಿದೆ.

೩. ಗ್ರಾಮ ಸಭೆಗಳು ಪಂಚಾಯತ್ ರಾಜ್ಯ ವ್ಯವಸ್ಥೆಯ ಆತ್ಮ ಅವುಗಳನ್ನು ನಿರ್ವೀರ್ಯಗೊಳಿಸುವ ಪ್ರಯತ್ನ ವಿವಿಧ ಹಂತಗಳಲ್ಲಿ ವಿವಿಧ ಬಗೆಗಳಲ್ಲಿ ನಡೆಯುತ್ತದೆ.

೪. ರಾಜ್ಯದಲ್ಲಿ ಪಂಚಾಯತ್ ರಾಜ್ಯ ವ್ಯವಸ್ಥೆ ಜಾರಿಗೆ ಬಂದಾಗ "ಇದು ಅಧಿಕಾರದ ವಿಕೇಂದ್ರೀಕರಣ ಅಲ್ಲ ಭ್ರಷ್ಟಾಚಾರದ ಕೇಂದ್ರೀಕರಣ" ಎಂದು ಕೆಲಚರು ಟೀಕೆ ಮಾಡಿದ್ದರು. ಕಳೆದ ಮೂವತ್ತು ವರ್ಷಗಳ ಅನುಭವದ ನಂತರ ಈ ಮಾತು ನಿಜವಾಗುತ್ತಿದೆ. ಗ್ರಾಮ ಪಂಚಾಯಿತಿಯಿಂದ ಹಿಡಿದು ಜಿಲ್ಲಾ ಪಂಚಾಯಿತಿಯವರೆಗೆ ಎಲ್ಲ ಕಡೆ ಲಂಚಗುಳಿತನ ಸಾಮಾನ್ಯವಾಗಿದೆ.

೫. ಪಂಚಾಯತ್ ರಾಜ್ಯ ಸಂಸ್ಥೆಗಳಿಗೆ ಹಣಕಾಸು ಹಂಚಿಕೆಯನ್ನು ನೋಡಿಕೊಳ್ಳುವ ಸಲುವಾಗಿ ರಾಜ್ಯ ಹಣಕಾಸು ಆಯೋಗಗಳನ್ನು ರಚಿಸುವುದು ಸಂವಿದಾನಿಕವಾಗಿ ಕಡ್ಡಾಯವೇನೊ ಸರಿ ಆದರೆ ಅವುಗಳ ವರದಿಯ ಗತಿ ಏನಾಗಿದೆ ಎಂಬುದು ಗೊತ್ತಾಗುತ್ತಿಲ್ಲ. ಆದ್ದರಿಂದ ಪಂಚಾಯತ್ ರಾಜ್ಯ ಸಂಸ್ಥೆಗಳಲ್ಲಿ ಸಿಬ್ಬಂದಿ ನೇಮಕಾತಿ ಗೊಂದಲದ ಗೂಡಾಗಿದೆ.

ಮೇಲ್ಕಾಣಿಸಿದ ಮಾತುಗಳನ್ನು ಗಮನಿಸಿದಲ್ಲಿ ಪಂಚಾಯತ್ ರಾಜ್ಯ ವ್ಯವಸ್ಥೆ ಗ್ರಾಮ ರಾಜ್ಯದತ್ತ ಮತ್ತು ಗ್ರಾಮರಾಜ್ಯದಿಂದ ರಾಮರಾಜ್ಯದತ್ತ ಹೋಗುವ ಕಾಲ ಇನ್ನೂ ಬಂದಿಲ್ಲವೆಂಬುದು ಸ್ಪಷ್ಟವಾಗುತ್ತದೆ. ರಮೇಶ್‌ಕುಮಾರ್ ವರದಿ ಗ್ರಾಮರಾಜ್ಯದ ಮೂಲ ತಿರುಳನ್ನು ಮತ್ತು ಆ ಬಗ್ಗೆ ಗಾಂಧಿ - ವಿನೋಬಾ - ಜಯಪ್ರಕಾಶ್ - ಲೋಹಿಯಾ ಮುಂತಾದ ಚಿಂತಕರ ಆಶಯಗಳನ್ನು ಅರ್ಥಮಾಡಿಕೊಂಡಿಲ್ಲವೆಂದು ಗೊತ್ತಾಗುತ್ತದೆ.ರಮೇಶ್‌ಕುಮಾರ್ ರವರ ಶಿಫಾರಸ್ಸುಗಳಲ್ಲಿ ಎಲ್ಲಿಯೂ ಗಾಂಧಿ ಮತ್ತು ವಿನೋಬಾರ ಕಲ್ಪನೆಯ ವಿಚಾರಗಳನ್ನು ಪ್ರಸ್ತಾಪಿಸಿಲ್ಲ. ಕೇವಲ ಸಮಸ್ಯೆಗಳ ಆಡಳಿತಾತ್ಮಕ ಪರಿಹಾರಗಳನ್ನು ಸೂಚಿಸಿದೆಯೇ ಹೊರತು ಹೊಸ ಸಮಾಜ ರಚನೆಯ, ಹೊಸ ಮೌಲ್ಯಗಳ ಸ್ಥಾಪನೆಯ ಮಾತನ್ನು ಹೇಳಿಲ್ಲ. ಗ್ರಾಮರಾಜ್ಯವಾಗಬೇಕಾದರೆ ಆಯಾ ಗ್ರಾಮದ ಭೂಮಿಯ ಒಡೆತನ ಆ ಗ್ರಾಮಕ್ಕೆ ಸೇರಿದ್ದಾಗಿರಬೇಕು. ಎಲ್ಲಿಯವರೆಗೆ ಗ್ರಾಮಕ್ಕೆ ಸಂಬಂಧಿಸಿದ ಭೂಮಿಯನ್ನು ಸರ್ಕಾರವನ್ನೂ ಒಳಗೊಂಡಂತೆ ಯಾರು ಬೇಕಾದರೂ ಖರೀದಿಸಿ ಪರಭಾರೆ ಮಾಡುವ ಸ್ಥಿತಿ ಇರುತ್ತದೊ ಅಲ್ಲಿಯವರೆಗೆ ಗ್ರಾಮರಾಜ್ಯದ ಗುರಿಯನ್ನಿಟ್ಟುಕೊಂಡಿರುವ ಪಂಚಾಯತ್ ರಾಜ್ಯವಾಗಲಿ ಅಂತಿಮ ಗುರಿಯಾದ ರಾಮರಾಜ್ಯವಾಗಲಿ ಸ್ಥಾಪನೆಗೊಳ್ಳುವುದು ಅಸಾಧ್ಯ.

ಚಲನಶೀಲತೆ....

–ಡಾ.ಬೋರೇಗೌಡ ಚಿಕ್ಕಮರಳಿ

'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎಂಬುದು ಬಸವಣ್ಣನವರ ಪ್ರಸಿದ್ಧ ಸೂಕ್ತಿ. ಸ್ಥಾವರ ಎಂದರೆ ಸ್ಥಿರವಾದದ್ದು, ಚಲಿಸುವ ಗುಣವಿಲ್ಲದ್ದು, ಜಡ ಅಥವಾ ನಿರ್ಜೀವ ಎಂದಾಗುತ್ತದೆ. ಇದಕ್ಕೆ ವ್ಯತಿರಿಕ್ತವಾದದ್ದು ಜಂಗಮ. ಯಾವುದು ಚಲನಶೀಲವಾದದ್ದೊ, ಜೀವಂತಿಕೆಯಿಂದ ಕೂಡಿರುವಂತಹುದೊ ಅದು ಜಂಗಮ. ಚೈತನ್ಯಯುತವಾದುದು ಎಂದೂ ತಿಳಿಯಬಹುದು. ಚಲನಶೀಲತೆ ಜೀವಂತಿಕೆಯ ಅಥವಾ ಚೈತನ್ಯದ ಕುರುಹು. ಜೀವವಿರುವುದೆಲ್ಲ ಚಲನಗುಣವನ್ನು ಹೊಂದಿರುತ್ತದೆ. ಗಿಡಮರಗಳಿಗೂ ಜೀವವಿದೆ. ಜೀವಮಾನವಿಡೀ ಒಂದೇ ಕಡೆ ನಿಂತಿದ್ದರೂ ಒಂದು ರೀತಿಯ ಚಲನಶೀಲತೆ ಅವುಗಳಿಗೂ ಉಂಟು. ಚಿಗುರು, ಹಸಿಡು, ಹೂವು, ಹಣ್ಣು, ಬೀಜ, ಹಳದಿ ಮುಂತಾದ ಸ್ಥಿತ್ಯಂತರಗಳು ಅವುಗಳ ಚಲನಶೀಲತೆಯಿಂದಲೇ ಉಂಟಾಗುತ್ತವೆ. ಸ್ಥಿತಿಸ್ಥಾಪಕತ್ವ, ಅಂದರೆ ಇದ್ದ ಹಾಗೇ ಇರುವುದು ಚಲನಶೀಲತೆಗೆ ಒಗ್ಗದ ಗುಣ. ಬೆಳವಣಿಗೆ, ಅಭಿವೃದ್ಧಿ, ಶ್ರೇಯಸ್ಸು ಮುಂತಾದ ಸಕಾರಾತ್ಮಕ ಸ್ಥಿತ್ಯಂತರಗಳು ಏರ್ಪಡಬೇಕಾದರೆ ಚಲನಶೀಲತೆ ಬೇಕೇಬೇಕು. ಭೂಮಿಯ ಮೇಲಣ ಜೀವರಾಶಿಗಳೆಲ್ಲವೂ ಚಲನಶೀಲವಾದವುಗಳೇ. ಮನುಷ್ಯ ಮೊದಲಾದ ಪ್ರಾಣಿ ಸಂಕುಲದಲ್ಲಂತೂ ಈ ಗುಣ ಸ್ವಚ್ಛಂದವಾಗಿಯೇ ಇದೆ.

ಚಲನಶೀಲತೆಯ ಮುಂದುವರಿದ ಗುಣ ಕ್ರಿಯಾಶೀಲತೆ. ಕ್ರಿಯಾಶೀಲತೆ ರಚನಾತ್ಮಕ ಕಾರ್ಯಗಳಿಗೆ ಕಾರಣವಾದದ್ದು. ವಸತಿ ನಿರ್ಮಾಣ ಮಾಡಿಕೊಳ್ಳುವ, ಆಹಾರ ಸಂಪಾದನೆಯಲ್ಲಿ ತೊಡಗಿಕೊಳ್ಳುವ, ಸಂತಾನಾಭಿವೃದ್ಧಿ ಮಾಡುವ ಕ್ರಿಯೆಗಳೂ ಕಿಯಾಶೀಲತೆಯ ಕುರುಹುಗಳೇ. ಆದರೂ ಇವು ನಿಸರ್ಗಸಹಜವಾದುವು, ಪ್ರಾಣಿವರ್ಗದಲ್ಲೆಲ್ಲಾ ಸಹಜವಾಗಿ ತೋರ್ಪಡಿಸುವಂತಹವು. ನಿಸರ್ಗ ಸಹಜವಲ್ಲದ, ಬುದ್ಧಿ ಪ್ರೇರಕವಾದ ಅದೆಷ್ಟೋ ಕಾರ್ಯಗಳನ್ನು ಮನುಷ್ಯ ಮಾಡುತ್ತಿರುತ್ತಾನೆ. ತನ್ನ ಬೌದ್ಧಿಕ ಸಾಮರ್ಥ್ಯವನ್ನು ಮೆರೆಯುತ್ತಾನೆ. ಮಾನವಸಮಾಜದ ಸಂಸ್ಕೃತಿವಿಕಾಸ, ನಾಗರಿಕತೆಯ ಬೆಳವಣಿಗೆ, ವೈಜ್ಞಾನಿಕ ಅನ್ವೇಷಣೆಗಳು ಉಂಟಾಗಿರುವುದು ಅವನ ಇಂತಹ ಕಾರ್ಯಗಳಿಂದಲೇ. ಸಮಾಜ ಕಂಟಕವಲ್ಲದ, ವಿನಾಶಕಾರಿಯಲ್ಲದ ಇಂತಹ ಕಾರ್ಯಗಳಲ್ಲಿ ಮನುಷ್ಯ ಯಾವಾಗಲೂ ತೊಡಗಿಕೊಂಡಿರುವುದು ಅವನ ಕ್ರಿಯಾಶಾಲಿತ್ವವನ್ನು ತೋರಿಸುತ್ತದೆ. ಇಂತಹ ಕಾರ್ಯಗಳು ಮಾನವ ಬದುಕನ್ನು ಸ್ಥಗಿತಗೊಳಿಸದೆ ಚಲನಶೀಲವಾಗಿರುವಂತೆ ಮಾಡುತ್ತವೆ. ಜಡತೆ ಅಥವಾ ಸ್ಥಿತಿಸ್ಥಾಪಕತ್ವ ಅಥವಾ ಯಥಾಸ್ಥಿತಿವಾದ ಚಲನಶೀಲತೆಯನ್ನು ಕಳೆದುಕೊಂಡ ಮನಸ್ಸುಗಳಲ್ಲಿ, ಸಮಾಜದಲ್ಲಿ ಕಾಣಿಸಿಕೊಳ್ಳುವ ಗುಣಗಳು. ಇಂತಹ ಗುಣಗಳು ಉಲ್ಬಣಿಸಿದಾಗ ಸಾಮಾಜಿಕ ಬೆಳವಣಿಗೆ ಕುಂಠಿತವಾಗುತ್ತದೆ; ಸಂಪ್ರದಾಯ, ಕಂದಾಚಾರ, ಮೌಢ್ಯ, ವೈಚಾರಿಕವಲ್ಲದ ಮೂಲಭೂತವಾದ ಮೊದಲಾದ ನಕಾರಾತ್ಮಕ ವಿದ್ಯಮಾನಗಳು ಕಾಣಿಸಿಕೊಂಡು ಪಟ್ಟಭದ್ರ ಹಿತಾಸಕ್ತಿಗಳು ಮೆರೆಯುತ್ತವೆ. ಈ ಬೆಳವಣಿಗೆಗಳು ಕಾಣಿಸಿಕೊಂಡ

ಸಮಾಜದಲ್ಲಿ ಹೊಸತನ ಸಾಧ್ಯವಿಲ್ಲ ಅದು ಸಾಗುವುದು ವಿನಾಶದತ್ತಲೇ ಹೊರತು, ಅಭಿವೃದ್ಧಿಯ ಹಾಗೂ ಶ್ರೇಯಸ್ಸಿನ ಕಡೆಗಲ್ಲ. ಈ ಕಾರಣದಿಂದಲೇ ಬಸವಣ್ಣನವರು ಸ್ಥಾವರತ್ವವನ್ನು ನಿರಾಕರಿಸಿ ಜಂಗಮತ್ವವನ್ನು ಪುರಸ್ಕರಿಸಿದ್ದು.

ಶರಣ ಧರ್ಮದಲ್ಲಿ 'ಜಂಗಮ' ಎಂಬ ಮಾತು ವಿರಕ್ತ, ಯೋಗಿ ಎಂಬ ಅರ್ಥದಲ್ಲಿ ಬಳಕೆಯಾಗಿದೆ. ಒಂದೆಡೆ ನೆಲೆನಿಲ್ಲದೆ ಊರಿಂದ ಊರಿಗೆ ಸಂಚರಿಸುತ್ತ ಸದ್ವಿಚಾರಗಳನ್ನು ಹರಡುತ್ತ ಧರ್ಮ ಪ್ರಚಾರದಲ್ಲಿ ತೊಡಗಿಸಿಕೊಂಡ ವಿರಕ್ತನನ್ನು ಶರಣರು ಜಂಗಮ ಎಂದು ಕರೆದರು. ಜನರಿಗೆ ಶಿವನನ್ನು ಕಾಣುವ ಮಾರ್ಗವನ್ನು ತೋರುವುದು ಜಂಗಮರ ಉದ್ದೇಶ; ಶಿವಸಾಕ್ಷಾತ್ಕಾರವೇ ಅವರ ಗುರಿ. 'ಯತ್ರ ಜೀವಃ ತತ್ರ ಶಿವಃ' ಎಂಬ ಮಾತಿದೆ. ಎಲ್ಲಿ ಜೀವಿಯೋ ಅಲ್ಲೆ ಶಿವ. ಸಕಲರಲ್ಲೂ ಶಿವನನ್ನೆ ಕಾಣುವ ಉದಾತ್ತ ಮನಸ್ಸಿನಿಂದ ಹೊಮ್ಮಿದ್ದು ಈ ಸೂಕ್ತಿ. ಚಲನಶೀಲತೆ ಜೀವಂತಿಕೆಯ ಕುರುಹು ಎಂದು ಆರಂಭದಲ್ಲೆ ಹೇಳಲಾಗಿದೆ. ಚಲನಶೀಲ ಮಾನವ ಸಮಾಜವು ಎಸಗುವ ಎಲ್ಲ ಕಾರ್ಯಗಳು ಶಿವನನ್ನು ದರ್ಶಿಸುವ ಉದ್ದೇಶದಿಂದ ಕೂಡಿರಬೇಕು. ಆ ಶಿವದರ್ಶನ ಯಾವ ಕಾರಣಕ್ಕೂ ಉದ್ದಿಷ್ಟ ಗುರಿಯಾಗಬಾರದು. ಶಿವನನ್ನು ಕಾಣುವ ತತ್ವ ವಿಚಾರಗಳನ್ನು ಇತರರೂ ಕಾಣುವಂತೆ ಮಾಡುವ ಕಾರ್ಯಕ್ಷಮತೆಯನ್ನು ಹೊಂದಿರುವವನೆ ಯೋಗಿ ಅಥವಾ ಜಂಗಮ. ಇಂತಹ ಜಂಗಮರ ಸಂತಾನ ಹೆಚ್ಚಿದಷ್ಟೂ ಸಮಾಜ ಹೆಚ್ಚು ಚಲನಶೀಲವಾಗುತ್ತದೆ. ಹೊಸಹೊಸ ಆಯಾಮಗಳನ್ನು ಆವಿಷ್ಕಾರಗಳನ್ನು ಸಾಧಿಸಿ ಮಾದರಿ ಸಮಾಜವಾಗುತ್ತದೆ.

ಹೀಗೆ ಹೇಳುತ್ತ ಸಮಾಜದ ಸ್ಥಾಪಕತ್ವ ಜಂಗಮತ್ವ ಎಂಬ ದ್ವಿಮುಖತೆಯನ್ನು ಒಪ್ಪಿಕೊಂಡು, ಸ್ಥಾವರತ್ವ ನಿರಾಕರಣೆಗಾಗಿಯೆ ಇರುವಂತಹುದು, ಜಂಗಮತ್ವ ಮಾತ್ರ ಸ್ವೀಕರಣಯೋಗ್ಯವಾದದ್ದು ಎಂದು ಪ್ರತಿಪಾದಿಸಿದಂತಾಗುವುದರ ಸೂಕ್ಷ್ಮವನ್ನು ಕುರಿತೂ ಸ್ವಲ್ಪ ಯೋಚಿಸಬೇಕು. ಸಂತರು ಈ ಸೂಕ್ಷ್ಮವನ್ನು ಯೋಚಿಸದೆಯಿಲ್ಲ. ಬಸವಣ್ಣನವರದೆ ಇನ್ನೊಂದು ವಚನ ಹೀಗಿದೆ : 'ಸ್ಥಾವರ ಜಂಗಮವೆಂಬ ಉಭಯ ಪಕ್ಷ ಒಂದೆ; ಆವ ಮುಖದಲ್ಲಿ ಬಂದರೂ ತೃಪ್ತಿಯೊಂದೆ; ಕೂಡಲಸಂಗಮದೇವರ ಆಪ್ಯಾಯವೊಂದೆ. ಇಲ್ಲಿರುವುದು ವಿಶಾಲ ತತ್ವದೃಷ್ಟಿ; ಸ್ಥಾವರತ್ವದಲ್ಲೂ ಜಂಗಮತ್ವವನ್ನು ಕಾಣುವ ಉದಾತ್ತ ಮನೋಭಾವ. ಈಗಾಗಲೇ ಹೇಳಿದ 'ಯತ್ರ ಜೀವಃ ತತ್ರಶಿವಃ' ಎಂಬ ಸೂಕ್ತಿಯನ್ನು ಹೊಮ್ಮಿಸಿದ ಮಾನಸಿಕ ನೆಲೆಯೇ ಇಲ್ಲಿಯೂ ಕೆಲಸ ಮಾಡಿದೆ. 'ಪಾಪಿಗುಮುದ್ಧಾರವಿಹುದೌ ಸೃಷ್ಟಿಯ ಈ ಜಗದವ್ಯೂಹ ರಚನೆಯೊಳ್' ಎಂಬ ಮಾತನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು. ಸದ್ವಿಚಾರಗಳು, ಚಲನಶೀಲತೆಗೆ ಕಾರಣವಾಗುವ ಪ್ರೇರಕಾಂಶಗಳು ಸ್ಥಾವರತ್ವದ ಮುಖದಿಂದಲೂ ಹೊಮ್ಮಬಹುದು. ಆದರೆ ಅವು ಅಂತರಾಳದಿಂದ, ಅಂತಃಕರಣಶೀಲತೆಯಿಂದ ಬಂದಿದೆಯೇ ಎಂಬುದು ವಿಚಾರ ಮಾಡಬೇಕಾದ ಸಂಗತಿ. ಅದು ಹೇಗೂ ಇರಲಿ, ಇಲ್ಲಿರುವ ಅದ್ವೈತ ತತ್ವದ ಸಾರ ಇದು. ಸತ್ ಮತ್ತು ಅಸತ್‌ಗಳು ಶಿವದ ವಿಭಿನ್ನ ಮುಖಗಳೆಂದು ಭಾವಿಸುತ್ತಾ, ಸದ್ವಿಚಾರಗಳು, ಸತ್ಪ್ರೇರಣೆಗಳು ಎಲ್ಲಿಂದ ಬಂದರೂ ಸ್ವೀಕರಿಸುತ್ತಾ, ಒಂದೆ ಪರಿಣಾಮದತ್ತ ಸಾಗುವುದು ಅಸತ್ತನ್ನೂ ಸತ್ತಾಗಿ ಪರಿವರ್ತಿಸಿಕೊಂಡು, ನಿಜಶಿವದಲ್ಲಿ ಲೀನವಾಗಿಸಿಕೊಂಡು ಪ್ರಗತಿ ಸಾಧಿಸುವುದು ವಿಘಟನಾರಹಿತ ಸಮಾಜವನ್ನು ಸ್ಥಾಪಿಸುವುದು ಪ್ರತಿಯೊಬ್ಬ ಚಲನಶೀಲ ಮಾನವನ ಗುರಿಯಾಗಬೇಕು. ಆಗಮಾತ್ರ ಅಚ್ಛಿನ್ನ ಸಂತೃಪ್ತಿ, ಆಪ್ಯಾಯಮಾನತೆ , ಮಾನವ ಸಮಾಜದಲ್ಲಿ ನೆಲಸುತ್ತದೆ.

ಸುಸ್ಥಿರ ಅಭಿವೃದ್ಧಿ

- ಪ್ರೊ. ಬಿ.ಎಂ. ಕುಮಾರಸ್ವಾಮಿ

ಕಳೆದ ೨೫-೩೦ ವರ್ಷಗಳಿಂದ ಅಭಿವೃದ್ಧಿಯ ಸುಸ್ಥಿರತೆ ಅಥವಾ ಸುಸ್ಥಿರ ಅಭಿವೃದ್ಧಿ (Sustainable Development) ಯು ಬಗ್ಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ವಿಪರೀತ ಚರ್ಚೆ ನಡೆಯುತ್ತಿದೆ. 'A system is remembered only when it goes wrong ' ಎಂಬ ಇಂಗ್ಲೀಷ್ ಹೇಳಿಕೆಯೊಂದಿದೆ: ಒಂದು ವ್ಯವಸ್ಥೆಯನ್ನು ನಾವು ನೆನಪಿಸಿಕೊಳ್ಳುವುದು ಅದು ಹಾಳಾದಾಗಲೇ. ಹೃದಯ ಸರಿಯಾಗಿ ಕೆಲಸ ಮಾಡುತ್ತಿರುವಾಗ ನಾವು ಅದನ್ನು ನೆನಪಿಸಿಕೊಳ್ಳುವುದೇ ಇಲ್ಲ. ಅದರ ನೆನಪಾಗುವುದು ಅದು ಕೆಟ್ಟು ಕೂತಾಗಲೇ.

ಈ ಭೂಮಿ ಜನ್ಮ ತಳೆದು ಸುಮಾರು ೬೦೦ ಕೋಟಿ ವರ್ಷಗಳಾಗಿದೆ ಎಂದು ವಿಜ್ಞಾನಿಗಳು ಅಂದಾಜು ಮಾಡಿದ್ದಾರೆ. ಮನುಷ್ಯನ ಅವತಾರವಾಗಿ ಕೇವಲ ೪೦,೦೦೦ ವರ್ಷಗಳಾಗಿರಬಹುದು. ಕೈಗಾರಿಕೆ ಆಧಾರಿತ ಆಧುನಿಕ ಅಭಿವೃದ್ಧಿ ಪ್ರಾರಂಭವಾಗಿದ್ದು ಸುಮಾರು ಕ್ರಿ.ಶ. ೧೮೦೦ ರಲ್ಲಿ. ಅಂದರೆ ಇಂದಿಗೆ ಕೇವಲ ೨೦೦ ವರ್ಷಗಳ ಹಿಂದೆ. ಇಂಗ್ಲೆಂಡಿನಲ್ಲಿ ಉಂಟಾದ ಕೈಗಾರಿಕಾ ಕ್ರಾಂತಿ ಕ್ರಮೇಣ ಇಡೀ ಯೂರೋಪು ಹಾಗೂ ಅಮೇರಿಕಕ್ಕೆ ಹರಡಿತು. ಇಂದು ಇಡೀ ಜಗತ್ತು ಕೈಗಾರಿಕೆ, ತಂತ್ರಜ್ಞಾನ ಹಾಗೂ ಕಲ್ಲಿದ್ದಲು ಮತ್ತು ಪೆಟ್ರೋಲಿಯಂ ಆಧಾರಿತ ಪಾಶ್ಚಾತ್ಯ ಅಭಿವೃದ್ಧಿ ಮಾದರಿಯನ್ನು ಅನುಸರಿಸುತ್ತಾ ಇದೆ. ಕ್ರಿ.ಶ. ೧೮೦೦ ರವರೆಗೆ ಪರಿಸರದ ಜೊತೆಗೆ ಹೆಚ್ಚಿನ ಘರ್ಷಣೆ ಇಲ್ಲದೆ ಕೃಷಿ, ಸರಳ ಕೈಗಾರಿಕೆಗಳನ್ನು ನಡೆಸುತ್ತಾ ಸಾಧಾರಣ ಹಾಗೂ ಸಂತೃಪ್ತ ಜೀವನವನ್ನು ನಡೆಸುತ್ತಾ ಇದ್ದ ಮಾನವ. ಇಂದಿನಂತೆ ಯಾವುದೇ ಪರಿಸರದ ಸಮಸ್ಯೆಗಳನ್ನು ಸೃಷ್ಟಿಸದೇ ಪರಿಸರದೊಂದಿಗೆ ಹೊಂದಿಕೊಂಡು, ಸಾವಿರಾರು ವರ್ಷಗಳ ಕಾಲ ಜಗತ್ತಿನ ಎಲ್ಲಾ ದೇಶಗಳಲ್ಲಿ ಜನ ಬದುಕು ಸಾಗಿಸುತ್ತಿದ್ದರು. ಇದನ್ನೇ ಸುಸ್ಥಿರ ಅಭಿವೃದ್ಧಿ ಎನ್ನಲಾಗುತ್ತದೆ.ಆಗ, ಬದುಕು ಹೆಚ್ಚಿನ ಏರುಪೇರುಗಳಿಲ್ಲದೆ ಶಾಂತವಾಗಿ ಹರಿಯುವ ನದಿಯಂತೆ

ಸಾಗುತ್ತಿತ್ತು.

ಸುಮಾರು ೧೭೬೦ ರ ಹೊತ್ತಿಗೆ ಇಂಗ್ಲೆಂಡ್‌ನಲ್ಲಿ ಉಂಟಾದ ಕೈಗಾರಿಕಾ ಕ್ರಾಂತಿ, ಆರ್ಥಿಕ ಪ್ರಪಂಚದಲ್ಲಿ ಅಲ್ಲೋಲಕಲ್ಲೋಲವನ್ನೇ ಎಬ್ಬಿಸಿತು. ಕೇವಲ ೨೦೦-೨೫೦ ವರ್ಷಗಳ ಅತಿ ಸಣ್ಣ ಅವಧಿಯಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳು ಊಹೆಗೂ ನಿಲುಕದ ಸಿರಿವಂತಿಕೆಯನ್ನು ಕಂಡವು. ಹಾಗೂ ಬಹುಸಂಖ್ಯಾತ ಆಫ್ರಿಕಾ, ಏಷ್ಯಾ ಮತ್ತು ಲ್ಯಾಟಿನ್ ಅಮೆರಿಕದ ದೇಶಗಳ ಜನಗಳು ಶೋಷಣೆ ಹಾಗೂ ದಟ್ಟ ದಾರಿದ್ರ್ಯವನ್ನು ಮಾತ್ರ ಪಡೆದರು. ಬಡತನದ ಸಾಗರದಲ್ಲಿ ಶ್ರೀಮಂತಿಕೆಯ ದ್ವೀಪಗಳು ಹುಟ್ಟಿದವು. ಎರಡು ಮಹಾ ಯುದ್ಧಗಳು ನಡೆದದ್ದೂ ಕಳೆದ ೨೦೦ ವರ್ಷಗಳಲ್ಲಿಯೇ, ಪರಿಸರದೊಂದಿಗೆ ಘರ್ಷಣೆ, ಪರಿಸರದ ಶೋಷಣೆ, ಹಾಗೂ ಪರಿಸರ ಮಾಲಿನ್ಯ ಮತ್ತು ನಾಶ – ಇವು ಕಳೆದ ೨೦೦ ವರ್ಷಗಳ ಪಾಶ್ಚಿಮಾತ್ಯ ಅಭಿವೃದ್ಧಿ ಮಾದರಿಯ ಪ್ರಧಾನ ಲಕ್ಷಣಗಳಾಗಿವೆ.

೨೧ ನೇ ಶತಮಾನ ಪ್ರಾರಂಭವಾಗುತ್ತಿದ್ದಂತೆಯೇ ಸರ್ವನಾಶ ನಮ್ಮ ಕಣ್ಣೆದುರು ಧುತ್ತೆಂದು ನಿಂತಿದೆ. ವಿಶ್ವಸಂಸ್ಥೆ ಸ್ಥಾಪಿಸಿದ ಸುಮಾರು ೩೦೦೦ ವಿಜ್ಞಾನಿಗಳ ತಂಡ Inter Government Panel on Climate Change - I.P.C.C. ೨೭.೦೯.೨೦೧೩ ರಂದು ಬಿಡುಗಡೆ ಮಾಡಿದ ೫ ನೇ ವರದಿಯ ಪ್ರಮುಖ ಅಂಶಗಳು,

- ಕಳೆದ ೮ ಲಕ್ಷ ವರ್ಷಗಳಲ್ಲಿ ಇಲ್ಲದಷ್ಟು ಶಾಖಗ್ರಾಹಿ ಅನಿಲಗಳು (ಇಂಗಾಲದ ಡೈ ಆಕ್ಸೈಡ್, ಮಿಥೇನ್, ನೈಟ್ರಸ್ ಆಕ್ಸೈಡ್) ಇಂದು ವಾತಾವರಣದಲ್ಲಿ ಕಂಡು ಬರುತ್ತದೆ.
- ೨೦೪೦ ರ ಹೊತ್ತಿಗೆ ಜಾಗತಿಕ ಉಷ್ಣತೆ ೨ಲಿಅ ಮಿತಿಯನ್ನು ಮೀರಲಿದೆ.
- ೨೧೦೦ ರ ಹೊತ್ತಿಗೆ ಜಾಗತಿಕ ಉಷ್ಣತೆ ೪.೮ಲಿಅ ಯಷ್ಟು ಏರಲಿದೆ.
- ೨೦೫೦ ರ ಹೊತ್ತಿಗೆ ಉತ್ತರ ಧೃವ ಸಂಪೂರ್ಣ ಹಿಮರಹಿತವಾಗಲಿದೆ.
- ಜಾಗತಿಕ ಹವಾಮಾನ ವೈಪರೀತ್ಯ ೨೦೪೦ ರ ಹೊತ್ತಿಗೆ (ಮುಂದಿನ ಕೇವಲ ೨೫ ವರ್ಷಗಳಲ್ಲಿ) ಭಯಾನಕ ರೂಪ ತಾಳಲಿದೆ.

ಇದೆಲ್ಲದರ ಒಟ್ಟು ಪರಿಣಾಮವಾಗಿ ಮುಂದಿನ ಕೇವಲ ೪೦-೫೦ ವರ್ಷಗಳಲ್ಲಿ ಬಹು ಪಾಲು ಜೀವ ಸಂಕುಲಗಳು ನಾಶವಾಗಲಿದೆ.

ಪರಿಸರವನ್ನು ಧಿಕ್ಕರಿಸುವ ಈ ಪಾಶ್ಚಿಮಾತ್ಯ ಅಭಿವೃದ್ಧಿ ವಿಧಾನ, ಸುಸ್ಥಿರವಲ್ಲ. ಅದು ಅಸ್ಥಿರ. ಆದ್ದರಿಂದಲೇ ಕಳೆದ ೨೫-೩೦ ವರ್ಷಗಳಿಂದ 'ಸುಸ್ಥಿರ ಅಭಿವೃದ್ಧಿ' ಯ ಕೂಗು ಜೋರಾಗಿ ಕೇಳಿ ಬರುತ್ತಿದೆ.

೧೯೮೫ ರ ಸುಮಾರಿಗೆ ವಿಶ್ವಸಂಸ್ಥೆಯು 'ಸುಸ್ಥಿರ ಅಭಿವೃದ್ಧಿ' ಯ ಪರಿಕಲ್ಪನೆಯನ್ನು ವಿಷದವಾಗಿ ವಿವರಿಸಲು ನಾರ್ವೆ ದೇಶದ ಮಹಿಳಾ

ಪ್ರಧಾನಿ ಗ್ರೋ ಹ್ಯಾರ್ಲಂ ಬ್ರಂಟ್‌ಲ್ಯಾಂಡ್ ರ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಿಸಿತು. ಅದು 'ಬ್ರಂಟ್‌ಲ್ಯಾಂಡ್ ಸಮಿತಿ' ಎಂದೇ ಪ್ರಸಿದ್ಧವಾಗಿದೆ. ಅದು ೧೯೮೭ ರಲ್ಲಿ ತನ್ನ ವರದಿ ನೀಡಿತು. ಆ ವರದಿಯ ಹೆಸರು 'ನಮ್ಮ ಸಾಮಾನ್ಯ ಭವಿಷ್ಯ'. (Our Common Future). ತನ್ನ ವರದಿಯಲ್ಲಿ ಬ್ರಂಟ್‌ಲ್ಯಾಂಡ್ ಸುಸ್ಥಿರ ಅಭಿವೃದ್ಧಿಯನ್ನು ಹೀಗೆ ವಿವರಿಸಿದ್ದಾರೆ. 'Sustainable Development is that development by which the present generation is able to meet its requirements without adversely affecting the ability of the future generations to meet their requirements.' 'ಮುಂದಿನ ತಲೆಮಾರುಗಳು ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳುವ ಸಾಮರ್ಥ್ಯಕ್ಕೆ ಧಕ್ಕೆ ಉಂಟಾಗದಂತೆ ಇಂದಿನ ತಲೆಮಾರು ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳುವ ಅಭಿವೃದ್ಧಿಯೇ ಸುಸ್ಥಿರ ಅಭಿವೃದ್ಧಿ.'

ಅಂದರೆ ಬ್ರಂಟ್‌ಲ್ಯಾಂಡ್ ವರದಿಯ ಪ್ರಕಾರ ಅಭಿವೃದ್ಧಿ ಸುಸ್ಥಿರವಾಗಬೇಕಾದರೆ,

೧) ಇಂದಿನ ತಲೆಮಾರಿನವರಿಗೆ ಕೇವಲ ತಮ್ಮ ತಲೆಮಾರಿನ ಅಭಿವೃದ್ಧಿ ಕಾಳಜಿಯಷ್ಟೇ ಅಲ್ಲದೆ, ಮುಂದಿನ ಹಲವಾರು ತಲೆಮಾರುಗಳ ಅಭಿವೃದ್ಧಿ ಕಾಳಜಿಯೂ ಇರಬೇಕು.

೨) ನೈಸರ್ಗಿಕ ಸಂಪನ್ಮೂಲಗಳ ಬಳಕೆ ಹಾಗೂ ಅನುಭೋಗದ ಮೇಲೆ, ಇಂದಿನ ತಲೆಮಾರಿನವರಿಗೆ ನಿಯಂತ್ರಣವಿರಬೇಕು.

ಸುಸ್ಥಿರ ಅಭಿವೃದ್ಧಿಯ ಬಗ್ಗೆ ಪುರಾತನ ಭಾರತೀಯ ಚಿಂತನೆ ಅತ್ಯಂತ ನವೀನವೂ ಹಾಗೂ ಇಂದಿನ ಕಾಲಮಾನಕ್ಕೆ ಅತ್ಯಂತ ಸೂಕ್ತವೂ ಆಗಿದೆ. ಈಶಾವಾಸ್ಯ ಉಪನಿಷತ್ತಿನ ಮೊದಲ ಶ್ಲೋಕವನ್ನು ನಾವು ಗಮನಿಸಬಹುದು

ಈಶಾವಾಸ್ಯಂ ಇದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ ।
ತೇನ ತ್ಯಕ್ತೇನ ಭುಂಜೀಥಾ: ಮಾಗೃದ : ಕಸ್ಯಸ್ವಿದ್ ಧನಂ ॥

ಈ ಶ್ಲೋಕದ ಮೊದಲ ಸಾಲಿನ ಅರ್ಥ ಹೀಗಿದೆ :

ಈ ಜಗತ್ತಿನಲ್ಲಿರುವ ಎಲ್ಲಾ ಜೀವಿ ಹಾಗೂ ನಿರ್ಜೀವಿಗಳಲ್ಲಿ ಪರಮಾತ್ಮನಿದ್ದಾನೆ. ಆದ್ದರಿಂದ ಕಲ್ಲು, ಮಣ್ಣು , ಗಿಡಮರ, ಪ್ರಾಣಿಪಕ್ಷಿ , ನದಿ, ಸರೋವರ, ಅರಣ್ಯ – ಎಲ್ಲವೂ ಪವಿತ್ರವಾದವು. ಅವನ್ನು ಗೌರವದಿಂದ ಕಾಣಬೇಕು. ಅಂದರೆ, ಪರಿಸರ ಎಂಬುದು ದೈವೀ ಸ್ವರೂಪಿ. ಅದನ್ನು ಆರಾಧಿಸಬೇಕು.

ಎರಡನೇ ಸಾಲಿನ ಅರ್ಥ ಹೀಗಿದೆ.

ಪ್ರಕೃತಿ ಒದಗಿಸಿರುವ ಸಂಪನ್ಮೂಲಗಳನ್ನು ನಾವು ಅನುಭೋಗಿಸಬೇಕು.

ಆದರೆ ಆ ಸಂಪನ್ಮೂಲಗಳು ನಮಗೆ ಮಾತ್ರ ಸೇರಿದ್ದಲ್ಲ. ಇತರ ಪ್ರಾಣಿ ಪಕ್ಷಿಗಳು ಹಾಗೂ ಮುಂದಿನ ಹಲವಾರು ತಲೆಮಾರುಗಳ ಮನುಷ್ಯರು ಹಾಗೂ ಇತರ ಜೀವಿಗಳಿಗೂ ಆ ಸಂಪನ್ಮೂಲಗಳ ಮೇಲೆ ಅಧಿಕಾರವಿದೆ. ಆದ್ದರಿಂದ ಬೇರೆಯವರಿಗೂ (ಮುಂದಿನ ತಲೆಮಾರಿನವರಿಗೂ) ಉಳಿಸಿ, ನಾವು ಸಂಪನ್ಮೂಲಗಳನ್ನು ಬಳಕೆ ಮಾಡಬೇಕು. ಬೇರೆಯವರಿಗೆ ಸೇರಿದ ಸಂಪತ್ತನ್ನು ಕದಿಯಬೇಡಿ.

ಸುಸ್ಥಿರ ಅಭಿವೃದ್ಧಿಯ ಬಗ್ಗೆ ೨೦ ನೇ ಶತಮಾನದ ಕೊನೆಯಲ್ಲಿ ಬ್ರಂಟ್‌ಲ್ಯಾಂಡ್ ವರದಿ ಹೇಳಿದ್ದನ್ನು ಸಾವಿರಾರು ವರ್ಷಗಳ ಮೊದಲೇ, ಈಶಾವಾಸ್ಯ ಉಪನಿಷತ್ತು ಹೇಳಿದೆ ಎಂಬುದನ್ನು ನಾವು ಗಮನಿಸಬೇಕು. ಸುಸ್ಥಿರ ಅಭಿವೃದ್ಧಿಯ ಅಡಿಪಾಯ ಎಂದರೆ,

ಅ) ನೈಸರ್ಗಿಕ ಸಂಪನ್ಮೂಲಗಳು ನಮಗೆ ಮಾತ್ರ ಸೇರಿದ್ದಲ್ಲ, ಮುಂದಿನ ಹಲವಾರು ತಲೆಮಾರುಗಳಿಗೆ ಸೇರಿದ್ದು ಎಂಬ ಪ್ರಜ್ಞೆ,

ಆ) ಅನುಭೋಗದ ಮೇಲೆ ನಿಯಂತ್ರಣ.

'ಈ ಭೂಮಿ ಎಲ್ಲರ ಅಗತ್ಯಗಳನ್ನು ಪೂರೈಸಬಲ್ಲದು, ಎಲ್ಲರ ದುರಾಸೆಗಳನ್ನಲ್ಲ' ಎಂಬ ಮಹಾತ್ಮ ಗಾಂಧಿಯವರ ಪ್ರಸಿದ್ಧ ಹೇಳಿಕೆ ಈಶಾವಾಸ್ಯ ಉಪನಿಷತ್ತಿನ ಆಧುನಿಕ ರೂಪವೇ ಆಗಿದೆ.

ಪಾಶ್ಚಿಮಾತ್ಯ ಅಭಿವೃದ್ಧಿ ಮಾದರಿಯು ಅಸ್ಥಿರ ಅಭಿವೃದ್ಧಿ (Unsustainable Development) ಗೆ ಅತ್ಯುತ್ತಮ ಉದಾಹರಣೆ. ೬೦೦ ಕೋಟಿ ವರ್ಷಗಳಿಂದ ವಿಕಸನಗೊಂಡ ಈ ಭೂಮಿಯ ಜೀವಪೋಷಕ ವ್ಯವಸ್ಥೆ, ಜೀವ ವೈವಿಧ್ಯ ಹಾಗೂ ಸಂಪನ್ಮೂಲಗಳನ್ನೆಲ್ಲಾ ಕೇವಲ ೨೦೦ ವರ್ಷಗಳಲ್ಲಿ ಸರ್ವನಾಶದ ಅಂಚಿಗೆ ತಂದು ನಿಲ್ಲಿಸಿದೆ ಎಂದರೆ ಅದು ಎಷ್ಟು ಅವೈಜ್ಞಾನಿಕ ಹಾಗೂ ವಿನಾಶಕಾರಿಯಾಗಿದೆ ಎಂದು ಊಹಿಸಬಹುದು.

ಕಳೆದ ೨೦೦ ವರ್ಷಗಳಿಂದ ಜಗತ್ತಿನಾದ್ಯಂತ, ಪಾಶ್ಚಿಮಾತ್ಯ ಅಸ್ಥಿರ ಅಭಿವೃದ್ಧಿ ಮಾದರಿಯೇ ವಿಜೃಂಭಿಸುತ್ತಿದೆ. ತೀವ್ರ ಆರ್ಥಿಕ ಅಸಮಾನತೆ, ಜಲ, ನೆಲ ಮತ್ತು ವಾಯು ಮಾಲಿನ್ಯ , ಭೂ ತಾಪಮಾನ ಏರಿಕೆ ಹಾಗೂ ಹವಾಮಾನ ಬದಲಾವಣೆ – ಇವೇ ಮುಂತಾದ ಸಮಸ್ಯೆಗಳು ಈ ಅಸ್ಥಿರ ಅಭಿವೃದ್ಧಿ ಮಾದರಿಯ ವಿಷ ಫಲಗಳು. ಹತಾಶೆಗೊಂಡ ಜಗತ್ತಿನಲ್ಲಿ ನಿಧಾನವಾಗಿಯಾದರೂ ಸುಸ್ಥಿರ ಅಭಿವೃದ್ಧಿ ಬಗ್ಗೆ ಚಿಂತನೆ ಪ್ರಾರಂಭವಾಗಿದೆ. ಸುಸ್ಥಿರ ಅಭಿವೃದ್ಧಿ ಮಾದರಿ ಎಂದರೆ ಏನು ? ಅದರ ತತ್ವಗಳೇನು ? ಯಾವುದಾದರೂ ದೇಶದಲ್ಲಿ ಅದು ಕೆಲಸ ಮಾಡಿದೆಯೆ ? ಅದನ್ನು ಪುನ: ಸಮಕಾಲೀನ ಜಗತ್ತಿನಲ್ಲಿ ಆಚರಣೆಗೆ ತರಲು ಸಾಧ್ಯವೆ ? ಇತ್ಯಾದಿ ಪ್ರಶ್ನೆಗಳು ನಮ್ಮ ಮುಂದೆ ಸಹಜವಾಗಿ ಬರುತ್ತವೆ.

ಕಾಲವನ್ನು ಅಳತೆ ಮಾಡುವ ಬೇರೆ ಬೇರೆ ಪದ್ಧತಿಗಳು ಜಗತ್ತಿನಲ್ಲಿ ಇವೆ. ಭಾರತದಲ್ಲಿ, ಶಾಲಿವಾಹನ ಶಕೆ, ವಿಕ್ರಮ ಶಕೆ ಮುಂತಾದ ಪದ್ಧತಿಗಳು ಇಂದಿಗೂ ಬಳಕೆಯಲ್ಲಿವೆ. ಆದರೆ ಇಂದು ಜಗತ್ತಿನ ಎಲ್ಲಾ ದೇಶಗಳಲ್ಲಿ ಜಾರಿಯಲ್ಲಿರುವ ಪದ್ಧತಿ ಕ್ರಿಸ್ತ ಶಕೆ. ಕ್ರಿಸ್ತನ ಹುಟ್ಟಿದ ವರ್ಷದಿಂದ ಕಾಲಗಣನೆ ಮಾಡುವ ಪದ್ಧತಿ ಅದು. ಈ ವರ್ಷ ಕ್ರಿ.ಶ. ೨೦೧೪. ಅಂದರೆ ಕ್ರಿಸ್ತನ ನಂತರ ೨೦೧೪ ವರ್ಷಗಳ ಇತಿಹಾಸ ನಮ್ಮ ಮುಂದೆ ಇದೆ. ೨೧ ನೇ ಶತಮಾನದ ೧೪ ವರ್ಷ ಬಿಟ್ಟರೆ, ೨೦೦೦ ವರ್ಷಗಳ ದೀರ್ಘ ಇತಿಹಾಸ ನಮ್ಮದು. ಈ ೨೦೦೦ ವರ್ಷಗಳಲ್ಲಿ ಕಳೆದ, ಕೇವಲ ೩೦೦ ವರ್ಷಗಳ ಆರ್ಥಿಕ ಇತಿಹಾಸ ನಮಗೆ ಗೊತ್ತಿದೆ. ೧೮ ನೇ ಶತಮಾನದಲ್ಲಿ ಇಂಗ್ಲೆಂಡ್‌ನಲ್ಲಿ ಸಂಭವಿಸಿದ ಕೈಗಾರಿಕಾ ಕ್ರಾಂತಿಯ ಫಲವಾಗಿ ಕಳೆದ ೨೦೦ ವರ್ಷಗಳಲ್ಲಿ ಐರೋಪ್ಯ ರಾಷ್ಟ್ರಗಳು ಹಾಗೂ ಅಮೆರಿಕಾ – ಆರ್ಥಿಕವಾಗಿ ಅತ್ಯಂತ ಬಲಿಷ್ಠ ರಾಷ್ಟ್ರಗಳಾಗಿವೆ ಎಂದು ಇತಿಹಾಸ ಹೇಳುತ್ತದೆ. ಆದರೆ, ಅದಕ್ಕೆ ಹಿಂದಿನ ೧೭೦೦ ವರ್ಷಗಳಲ್ಲಿ ಜಗತ್ತಿನ ಆರ್ಥಿಕ ಸ್ಥಿತಿ ಹೇಗಿತ್ತು. ಯಾವ ದೇಶಗಳು ಮುಂದಿದ್ದವು ? ಯಾವ ದೇಶಗಳು ಹಿಂದಿದ್ದವು ? ಇದು ಯಾವುದೂ ನಮಗೆ ಸ್ಪಷ್ಟವಾಗಿ ತಿಳಿದಿಲ್ಲ. ಈ ವಿಷಯಗಳನ್ನು ತಿಳಿಯುವ ಸಲುವಾಗಿ ಜಗತ್ತಿನ ೩೫ ಶ್ರೀಮಂತ ರಾಷ್ಟ್ರಗಳ ಕೂಟವಾದ ಓ.ಇ.ಸಿ.ಡಿ. (Organisation for Economic Co-operation and Development) ಅಮೆರಿಕದ ಪ್ರಸಿದ್ಧ ಆರ್ಥಿಕ ಇತಿಹಾಸಕಾರ, ಮ್ಯಾಡಿಸನ್ ಆ್ಯಂಗಸ್ ಅವರ ನೇತೃತ್ವದಲ್ಲಿ ತಜ್ಞರ ಒಂದು ಸಮಿತಿಯನ್ನು ನೇಮಿಸಿತು. ಈ ಸಮಿತಿಯು ಆಳವಾದ ಸಂಶೋಧನೆ ನಡೆಸಿ 'World Economy – A Millenial Perspective' (ವಿಶ್ವ ಆರ್ಥಿಕತೆ – ಸಹಸ್ರಮಾನದ ನೋಟ) ಎಂಬ ಅಮೂಲ್ಯ ಗ್ರಂಥವನ್ನು ರಚಿಸಿತು. ಅದನ್ನು ಓ.ಇ.ಸಿ.ಡಿ. ಪ್ರಕಟಿಸಿತು. ಅದರ ಭಾರತೀಯ ಆವೃತ್ತಿ ೨೦೦೩ ರಲ್ಲಿ ಪ್ರಕಟವಾಯಿತು.

ಈ ಗ್ರಂಥದಲ್ಲಿ ಮ್ಯಾಡಿಸನ್ ಆ್ಯಂಗಸ್, ಕ್ರಿಸ್ತ ಶಕೆಯ ಪ್ರಾರಂಭದ ವರ್ಷದಿಂದ ಅಂದರೆ, '೦' ಕ್ರಿ.ಶ. ದಿಂದ ಕ್ರಿ.ಶ. ೧೭೦೦ ರವರೆಗಿನ ದೀರ್ಘ ಕಾಲದಲ್ಲಿ ಯಾವ ಯಾವ ದೇಶಗಳು ಆರ್ಥಿಕವಾಗಿ ಎಷ್ಟೆಷ್ಟು ಅಭಿವೃದ್ಧಿ ಸಾಧಿಸಿದ್ದವು ಎಂಬುದನ್ನು ಅಂಕಿಅಂಶಗಳ ಮೂಲಕ ವಿವರಿಸಿದ್ದಾರೆ. ಅವರ ಪ್ರಕಾರ ಕ್ರಿ.ಶ. '೦' ಯಲ್ಲಿ ಜಗತ್ತಿನ ಒಟ್ಟು ಉತ್ಪನ್ನ ೧,೦೨,೫೩೬ ಮಿಲಿಯ ಡಾಲರ್‌ಗಳು. ಅದರಲ್ಲಿ ಬಾರತದ ಪಾಲು, ೩೩,೭೫೦ ಮಿಲಿಯ ಡಾಲರ್ ಹಾಗೂ ಚೀನಾದ ಪಾಲು ೨೬,೮೨೦ ಮಿಲಿಯ ಡಾಲರ್. ಅಂದರೆ ಜಗತ್ತಿನ ಒಟ್ಟು ಉತ್ಪನ್ನದಲ್ಲಿ ಭಾರತದ ಪಾಲು ೩೩% ಆಗಿತ್ತು. ಅಂದರೆ ಆರ್ಥಿಕವಾಗಿ, ಭಾರತ ಜಗತ್ತಿನಲ್ಲೇ ಮೊಟ್ಟಮೊದಲ ಸ್ಥಾನದಲ್ಲಿತ್ತು. ಶೇ. ೨೬

ಪಾಲು ಹೊಂದಿದ್ದ ಚೀನ ಎರಡನೇ ಸ್ಥಾನದಲ್ಲಿತ್ತು. ಕ್ರಿಸ್ತ ಶಕೆಯ ಪ್ರಾರಂಭದ ವರ್ಷದಲ್ಲೇ ಭಾರತದ ಆರ್ಥಿಕತೆ ಜಗತ್ತಿನ ನಂ. ೧ ಸ್ಥಾನದಲ್ಲಿದ್ದರೆ, ಆ ಸ್ಥಾನಕ್ಕೆ ಅದು ಏಕಾಏಕಿ ಬರಲು ಸಾಧ್ಯವಿಲ್ಲ. ಅಂದರೆ, ಅದಕ್ಕೆ ಸುಮಾರು ೫೦೦ ವರ್ಷಗಳ ಮುಂಚಿನಿಂದಲೆ ಭಾರತ ಆರ್ಥಿಕ ಅಭಿವೃದ್ಧಿಯ ಮಂಚೂಣಿಯಲ್ಲಿ ಇದ್ದಿರಬೇಕು.

ಮ್ಯಾಡಿಸನ್ ಆ್ಯಂಗಸ್ ಕ್ರಿ.ಶ. ದ ಪ್ರಾರಂಭದಿಂದ ಕ್ರಿ.ಶ. ೧೭೦೦ ರವರೆಗೆ ವಿವಿಧ ಕಾಲ ಘಟ್ಟಗಳಲ್ಲಿ ಭಾರತ ಹಾಗೂ ಇತರ ದೇಶಗಳ ಆರ್ಥಿಕತೆಗಳನ್ನು ಅಳತೆ ಮಾಡಿದ್ದಾರೆ.

ಜಾಗತಿಕ ಉತ್ಪನ್ನದಲ್ಲಿ ವಿವಿಧ ದೇಶಗಳ ಶೇಕಡಾ ಪಾಲು

ದೇಶ	ಕ್ರಿ.ಶ. '೦'	ಕ್ರಿ.ಶ. '೧೦೦೦'	ಕ್ರಿ.ಶ. '೧೫೦೦'	ಕ್ರಿ.ಶ. '೧೭೦೦'
ಭಾರತ	೩೩	೨೯	೨೪.೫	೨೪.೪
ಚೀನಾ	೨೬.೨	೨೨.೭	೨೫	೨೨.೩
ಪ.ಯೂರೋಪು	೧೦.೮	೮.೭	೧೭.೯	೨೨.೫

ಕ್ರಿ.ಶ. '೦' ಇಂದ ಪ್ರಾರಂಭಿಸಿ, ಕ್ರಿ.ಶ. ೧೭೦೦ ರವರೆಗೆ, ೧೭೦೦ ವರ್ಷಗಳ ಕಾಲ ನಿರಂತರವಾಗಿ ಭಾರತ, ಜಗತ್ತಿನ ಅತ್ಯಂತ ಶ್ರೀಮಂತ ರಾಷ್ಟ್ರವಾಗಿ ಮೆರೆದಿರುವುದನ್ನು ಮೇಲಿನ ಪಟ್ಟಿ ತಿಳಿಸುತ್ತದೆ. ಕ್ರಿ.ಶ. ೧೭೦೦ ರಿಂದ ಈಚೆಗಷ್ಟೇ ಪಶ್ಚಿಮ ಯೂರೋಪು ಮುಂಚೂಣಿಗೆ ಬರತೊಡಗಿತು. ಬ್ರಿಟಿಷರು ಭಾರತಕ್ಕೆ ಬಂದ ನಂತರ ಭಾರತ ವೇಗವಾಗಿ ಅವನತಿ ಹೊಂದತೊಡಗಿತು. ಕ್ರಿಸ್ತ ಶಕೆಯ ೨೦೦೦ ವರ್ಷಗಳ ದೀರ್ಘ ಇತಿಹಾಸದಲ್ಲಿ ೧೭೦೦ ವರ್ಷಗಳ ಕಾಲ, ಅಂದರೆ, ಶೇ ೮೫ ರಷ್ಟು ಕಾಲಾವಧಿಯಲ್ಲಿ ಭಾರತ ಜಗತ್ತಿನ ನಂ. ೧ ಆರ್ಥಿಕತೆಯಾಗಿತ್ತು. ಪಾಶ್ಚಿಮಾತ್ಯ ರಾಷ್ಟ್ರಗಳ ಪ್ರಾಬಲ್ಯ ಏನಿದ್ದರೂ ಕಳೆದ ೩೦೦ ವರ್ಷಗಳಲ್ಲಿ ಮಾತ್ರ. ಭಾರತದ ಸಾಧನೆ ಅಭೂತಪೂರ್ವವೇ ಸರಿ. ಈ ದೀರ್ಘಾವಧಿಯಲ್ಲಿ ಕೃಷಿ, ಕೈಗಾರಿಕೆ, ವ್ಯಾಪಾರ, ಸಂಸ್ಕೃತಿ ಎಲ್ಲಾ ಕ್ಷೇತ್ರಗಳಲ್ಲೂ ಭಾರತ ಅಗ್ರಮಾನ್ಯ ರಾಷ್ಟ್ರವಾಗಿತ್ತು.

ಕ್ರಿಸ್ತ ಶಕೆಯ ೨೦೦೦ ವರ್ಷಗಳಲ್ಲಿ ೧೭೦೦, ವರ್ಷಗಳ ಕಾಲ ಭಾರತ ಜಾಗತಿಕ ಆರ್ಥಿಕತೆಯ ಉತ್ತುಂಗ ಸ್ಥಾನದಲ್ಲಿ ನಿರಂತರವಾಗಿ ಇದ್ದರೂ ಸಹಾ ಇಂದು ನಾವು ಕಾಣುತ್ತಿರುವಂತೆ ಯಾವುದೇ ಪರಿಸರ ಸಮಸ್ಯೆಗಳನ್ನು ಭಾರತ ಸೃಷ್ಟಿಸಲಿಲ್ಲ ಹಾಗೂ ಎದುರಿಸಲಿಲ್ಲ. ಅರಣ್ಯ ನಾಶ, ಜೀವ ವೈವಿಧ್ಯದ ನಾಶ, ಜಲ ಮಾಲಿನ್ಯ, ನದಿ ಮಾಲಿನ್ಯ, ವಾಯು ಮಾಲಿನ್ಯ, ಮಣ್ಣಿನ ಸವಕಳಿ – ಇವೇ ಮುಂತಾದ ಯಾವುದೇ ಪರಿಸರ ಸಂಬಂಧಿ ಸಮಸ್ಯೆಗಳು ಭಾರತದಲ್ಲಿ ಸೃಷ್ಟಿಯಾದ ಬಗ್ಗೆ ವೇದೋಪನಿಷತ್ತುಗಳು, ಪುರಾಣಗಳು, ರಾಮಾಯಣ, ಮಹಾಭಾರತ, ಭಾಗವತ ಮುಂತಾದ ಗ್ರಂಥಗಳಲ್ಲಿ ಉಲ್ಲೇಖಗಳು

ಕಂಡುಬರುವುದಿಲ್ಲ. ಅಂದರೆ, ಪರಿಸರ ಸ್ವಚ್ಛತೆ ಹಾಗೂ ಸಮತೋಲನವನ್ನು ನಾಶ ಮಾಡದೆಯೇ, ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಬಹುದು ಎಂಬುದನ್ನು ಭಾರತ ಒಂದಲ್ಲಾ , ಎರಡಲ್ಲಾ, ನಿರಂತರವಾಗಿ ೧೭ ಶತಮಾನಗಳ ಕಾಲ ಸಾಧಿಸಿ ತೋರಿಸಿದೆ. ಆದ್ದರಿಂದಲೇ ಭಾರತೀಯ ಅಭಿವೃದ್ಧಿ ಮಾದರಿಯನ್ನು ಸುಸ್ಥಿರ ಅಭಿವೃದ್ಧಿ ಮಾದರಿ ಎನ್ನಬಹುದು.

ಪಾಶ್ಚಿಮಾತ್ಯ ಅಭಿವೃದ್ಧಿ ಮಾದರಿಯ ಬೆನ್ನು ಹತ್ತಿದ ತಪ್ಪಿಗೆ ಭಾರತ ಇಂದು ಹತ್ತು ಹಲವು ಆರ್ಥಿಕ ಹಾಗೂ ಪಾರಿಸರಿಕ ಸಮಸ್ಯೆಗಳ ಗೂಡಾಗಿದೆ. ನಾವು ಮತ್ತೊಮ್ಮೆ ಪುರಾತನ ಭಾರತೀಯ ಅಭಿವೃದ್ಧಿ ಮಾದರಿಯತ್ತ ನೋಡಬೇಕು. ಅದನ್ನು ಪುನ: ಅಳವಡಿಸಿಕೊಳ್ಳುವತ್ತ ಚಿಂತಿಸಬೇಕು. ಭಾರತೀಯ ಅಭಿವೃದ್ಧಿ ಮಾದರಿಯ ಸ್ಥೂಲ ಲಕ್ಷಣಗಳು ಹೀಗಿರಬಹುದು.

ಭಾರತೀಯ ಚಿಂತನೆಯ ಪ್ರಕಾರ ಮಾನವ ಜೀವನಕ್ಕೆ ಎರಡು ಆಯಾಮಗಳಿವೆ. ಅವು ೧) ಭೌತಿಕ (Material) ಮತ್ತು ೨) ಆಧ್ಯಾತ್ಮಿಕ (Spiritual). ಮನುಷ್ಯ ಜೀವನಕ್ಕೆ ೪ ಉದ್ದೇಶಗಳನ್ನು ಹಿರಿಯರು ನಿರ್ಧರಿಸಿದ್ದಾರೆ. ಅವು ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ. ಇದನ್ನೇ ಪುರುಷಾರ್ಥಗಳು ಎನ್ನಲಾಗುತ್ತದೆ. ಪುರುಷಾರ್ಥಗಳಲ್ಲಿ ಧರ್ಮ ಮತ್ತು ಮೋಕ್ಷ ಅಧ್ಯಾತ್ಮಿಕ ಆಯಾಮವಾದರೆ, ಅರ್ಥ ಮತ್ತು ಕಾಮ ಭೌತಿಕ ಆಯಾಮವಾಗುತ್ತದೆ. ಅಂದರೆ ಭಾರತೀಯ ಚಿಂತನೆಯಲ್ಲಿ ಭೌತಿಕತೆ ಹಾಗೂ ಅಧ್ಯಾತ್ಮಿಕತೆಗೆ ಸಮಾನವಾದ ಪ್ರಾಮುಖ್ಯತೆ ನೀಡಲಾಗಿದೆ. ಕೇವಲ ಆಧ್ಯಾತ್ಮಿಕತೆ ಅಥವಾ ಕೇವಲ ಭೌತಿಕತೆ, ಮಾನವ ಜೀವನಕ್ಕೆ ಸಮಗ್ರತೆ ನೀಡುವುದಿಲ್ಲ. ಜೀವನದ ಸಮಗ್ರತೆಗೆ ಭೌತಿಕತೆ ಹಾಗೂ ಆಧ್ಯಾತ್ಮಿಕತೆ ಎರಡೂ ಅಗತ್ಯ. ಇದು ಭಾರತೀಯ ಚಿಂತನೆ.

ಇದಕ್ಕೆ ವಿರುದ್ಧವಾಗಿ ಇಂದಿನ ಪಾಶ್ಚಿಮಾತ್ಯ ಚಿಂತನೆಯಲ್ಲಿ ಜೀವನದ ಪರಮ ಗುರಿ, ಭೌತಿಕತೆ (Materialism) ಅರ್ಥ ಕಾಮಗಳು ಮಾತ್ರ ಅವರ ಪುರುಷಾರ್ಥಗಳು. ಅಲ್ಲಿ ಆಧ್ಯಾತ್ಮಿಕತೆಗೆ ಅಂದರೆ, ಧರ್ಮ ಮೋಕ್ಷಗಳಿಗೆ ಸ್ಥಾನವೇ ಇಲ್ಲ. ಆದ್ದರಿಂದ ಅಲ್ಲಿ ಮಾನವ ಜೀವನದ ಬಗ್ಗೆ ಆಂಶಿಕ ದೃಷ್ಟಿ ಇದೆಯೇ ಹೊರತು ಸಮಗ್ರ ದೃಷ್ಟಿ ಇಲ್ಲವೇ ಇಲ್ಲ. ಅದು ಸುಸ್ಥಿರ ಅಭಿವೃದ್ಧಿಗೆ ಪೂರಕವಾಗಿಲ್ಲ.

ಭಾರತೀಯ ಅಭಿವೃದ್ಧಿ ಮಾದರಿಯು ಜೀವನದ ಸಮಗ್ರತೆಯ ಮೇಲೆ ನಿರ್ಮಾಣವಾಗಬೇಕು.

ಭಾರತೀಯ ಚಿಂತನೆಯು ಪ್ರಮುಖವಾಗಿ ಧರ್ಮ ಆಧಾರಿತವಾದದು. ಆದ್ದರಿಂದಲೇ ಪುರುಷಾರ್ಥಗಳಲ್ಲಿ ಅಗ್ರ ಸ್ಥಾನ ಧರ್ಮಕ್ಕೇ , ಅರ್ಥ

ಕಾಮಗಳು ಅಭಿವೃದ್ಧಿಗೆ ಅಗತ್ಯ. ಆದರೆ ಅವು ಧರ್ಮದ ಚೌಕಟ್ಟಿನಲ್ಲಿಯೇ ಇರಬೇಕು. ಆಗ ಮಾತ್ರ ಕ್ಷೇಮ. ಧರ್ಮದ ಎಲ್ಲೆ ಮೀರಿದ ಅರ್ಥ ಕಾಮಗಳು ಅಪಾಯಕಾರಿ.

ಪರಿತ್ಯಜೇತ್ ಅರ್ಥ ಕಾಮೌ
ಯೌ ಸ್ಯಾತಾಂ ಧರ್ಮ ವರ್ಜಿತೌ ॥

ಧರ್ಮಬಾಹಿರವಾದ ಅರ್ಥ ಕಾಮಗಳನ್ನು ಕೈಬಿಡು ಎಂದು ಮನು ಎಚ್ಚರ ನೀಡುತ್ತಾನೆ. ಭಾರತೀಯ ಅಭಿವೃದ್ಧಿ ಮಾದರಿಯು ಧರ್ಮ ಆಧಾರಿತವಾದದ್ದಾಗಿರಬೇಕು.

ಭಾರತೀಯ ಚಿಂತನೆಯು ಪ್ರಕೃತಿ ಅಥವಾ ಪರಿಸರವನ್ನು ತಾಯಿಯ ರೂಪದಲ್ಲಿ ಕಾಣುತ್ತದೆ. ಪರಿಸರ ಮನುಷ್ಯನಿಗೆ ಮಾತ್ರ ಸೇರಿದ್ದಲ್ಲ. ಅವನು ಅದರ ಯಜಮಾನನೂ ಅಲ್ಲ. ಇತರ ಎಲ್ಲಾ ಜೀವಿಗಳಂತೆ ಮನುಷ್ಯನೂ ಈ ಜೀವಿ ಕುಟುಂಬದ ಒಬ್ಬ ಸದಸ್ಯ ಮಾತ್ರ ಎಂಬ ಮೌಲಿಕ ಚಿಂತನೆ ಅಲ್ಲಿ ಗಾಢವಾಗಿದೆ. ಹಾಗೂ ನಮ್ಮ ಎಲ್ಲಾ ಆರ್ಥಿಕ ಚಟುವಟಿಕೆಗಳು, ಅಭಿವೃದ್ಧಿ ಕಾರ್ಯಗಳು ಪರಿಸರಕ್ಕೆ ಪೂರಕವಾಗಿರಬೇಕೇ ಹೊರತು ಮಾರಕವಾಗಿರಬಾರದು ಎಂಬ ಪ್ರಜ್ಞೆ ಪ್ರಬಲವಾಗಿದೆ. ಆದ್ದರಿಂದ ಭಾರತೀಯ ಅಭಿವೃದ್ಧಿ ಮಾದರಿಯು ಪರಿಸರ ಸುಸ್ಥಿರತೆ ಹೊಂದಿರುವುದು ಅಗತ್ಯ. ಪಾಶ್ಚಿಮಾತ್ಯ ಅಭಿವೃದ್ಧಿ ಮಾದರಿಯ ಚಾಲಕ ಶಕ್ತಿ ಅನುಭೋಗ. ಅನುಭೋಗ ಹೆಚ್ಚಾದಷ್ಟು, ಬೇಡಿಕೆ ಹೆಚ್ಚುತ್ತದೆ. ಅದರ ಫಲವಾಗಿ ಉತ್ಪಾದನೆ ಹೆಚ್ಚುತ್ತದೆ. ಅದರಿಂದ ಅಭಿವೃದ್ಧಿ ಹೆಚ್ಚುತ್ತದೆ. ಇದು ಅವರ ತರ್ಕ. ಈ ಕೊಳ್ಳುಬಾಕ ಸಂಸ್ಕೃತಿಯೇ ಪರಿಸರವೂ ಸೇರಿದಂತೆ ಎಲ್ಲಾ ಸಮಸ್ಯೆಗಳ ಮೂಲವಾಗಿದೆ. ಅಸ್ಥಿರ ಅಭಿವೃದ್ಧಿಯ ಮೂಲ ಕಾರಣ ಅದೇ.

ಅದಕ್ಕೆ ಪ್ರತಿಯಾಗಿ ಭಾರತೀಯ ಸಂಸ್ಕೃತಿಯು ಅನುಭೋಗದ ಮೇಲೆ ಸ್ವಯಂ ನಿಯಂತ್ರಣವಿರಬೇಕೆಂದು ಬೋಧಿಸುತ್ತದೆ. ಈಶಾವಾಸ್ಯ ಉಪನಿಷತ್ತಿನ ಮೊದಲ ಶ್ಲೋಕದಲ್ಲಿ ತೇನ ತ್ಯಕ್ತೇನ ಭುಂಜೀಥಾ ಮಾಗೃಧ : ಕಸ್ಯಸ್ವಿತ್ ಧನಂ ॥ ಎಂಬ ಉಕ್ತಿ ಇದನ್ನೇ ಸ್ಪಷ್ಟಪಡಿಸುತ್ತದೆ. "ಪ್ರಕೃತಿ ನೀಡಿರುವ ಸಂಪನ್ಮೂಲಗಳನ್ನು ಬೇರೆಯವರಿಗೂ ಉಳಿಸಿ ಅನುಭವಿಸು. ಬೇರೆಯವರಿಗೆ ಸೇರಿದ್ದ ಸಂಪತ್ತನ್ನು ಕದಿಯಬೇಡ" – ಈ ಉಪನಿಷತ್ ಸಂದೇಶ ಭಾರತೀಯರ ಜೀವನದಲ್ಲಿ ಹಾಸುಹೊಕ್ಕಾಗಿದೆ. ಅನುಭೋಗದ ಮೇಲಿನ ಈ ಸಾಂಸ್ಕೃತಿಕ ನಿಯಂತ್ರಣವೇ ೧೭೦೦ ವರ್ಷಗಳ ದೀರ್ಘಕಾಲ ಭಾರತ ಸುಸ್ಥಿರ ಅಭಿವೃದ್ಧಿಯನ್ನು ಅನುಭವಿಸಲು ಹಾಗೂ ಜಗತ್ತಿನ ಅತ್ಯಂತ ಶ್ರೀಮಂತ ರಾಷ್ಟ್ರವಾಗಲು ಕಾರಣವಾಯಿತು. ಆದ್ದರಿಂದ ಭಾರತೀಯ ಅಭಿವೃದ್ಧಿ ಮಾದರಿಯು ಅನುಭೋಗದ ಮೇಲೆ ಸ್ವಯಂ ನಿಯಂತ್ರಣಕ್ಕೆ ಅತಿ ಹೆಚ್ಚಿನ

ಉತ್ತೇಜನ ನೀಡಬೇಕು.

ಭಾರತ ಸಹಸ್ರಾರು ವರ್ಷಗಳಿಂದಲೂ ಕೃಷಿ ಪ್ರಧಾನ ದೇಶವಾಗಿಯೇ ಮುಂದುವರಿದಿದೆ. ಇಂದಿಗೂ ಶೇ. ೭೦ ರಷ್ಟು ಭಾರತೀಯರ ಬದುಕು ಕೃಷಿ ಆಧಾರಿತವಾಗಿಯೇ ಇದೆ. ಪಾಶ್ಚಿಮಾತ್ಯ ಅಭಿವೃದ್ಧಿ ಸಿದ್ಧಾಂತವು ಕೈಗಾರಿಕೆಗೆ ಪ್ರಧಾನ ಪಾತ್ರ ನೀಡುತ್ತದೆ. ಕೃಷಿಯನ್ನು ತಿರಸ್ಕಾರದಿಂದ ನೋಡುತ್ತದೆ. ಈ ಎರವಲು ಸಿದ್ಧಾಂತಕ್ಕೆ ಜೋತು ಬಿದ್ದ ಭಾರತ ಕಳೆದ ೬೦ ವರ್ಷಗಳಿಂದಲೂ ಕೃಷಿಯನ್ನು ತಿರಸ್ಕರಿಸುತ್ತಲೇ ಬಂದಿದೆ. ಹೀಗಾಗಿ ಇಂದು ಭಾರತ, ಕೈಗಾರಿಕೆಯಲ್ಲಾಗಲೀ ಅಥವಾ ಕೃಷಿಯಲ್ಲಾಗಲೀ ಗಣನೀಯ ಪ್ರಗತಿ ಸಾಧಿಸದೇ ತ್ರಿಶಂಕು ಸ್ಥಿತಿಯಲ್ಲೇ ಇದೆ. ಆದ್ದರಿಂದ ಭಾರತೀಯ ಅಭಿವೃದ್ಧಿ ಮಾದರಿಯು ಕೃಷಿಗೆ ಪ್ರಥಮ ಆದ್ಯತೆ ನೀಡಬೇಕು.

ಕೃಷಿ ಸುಸ್ಥಿರವಾಗಿರಬೇಕಾದರೆ, ಅದು ಸಾವಯವ ಕೃಷಿಯೇ ಆಗಿರಬೇಕಾದುದು ಅತ್ಯಂತ ಅವಶ್ಯಕ. ರಾಸಾಯನಿಕ ಗೊಬ್ಬರ, ಕೀಟನಾಶಕಗಳು, ಕುಲಾಂತರಿ ಬೀಜಗಳು ಮುಂತಾದ ಅಪಾಯಕಾರಿ ವಸ್ತುಗಳಿಂದ ಕೃಷಿ ಮುಕ್ತವಾಗಿರಬೇಕು.

ಸಾವಯವ ಕೃಷಿಯನ್ನು ಉತ್ತೇಜಿಸುವುದರಿಂದ, ದೇಸೀ ಗೋ-ತಳಿಗಳ ಸಂರಕ್ಷಣೆ ಹಾಗೂ ಸಂವರ್ಧನೆಯೂ ಸಾಧ್ಯವಾಗುತ್ತದೆ.

ಪಾಶ್ಚಿಮಾತ್ಯ ಅಭಿವೃದ್ಧಿ ಮಾದರಿಯು ನಗರ ಪ್ರಧಾನವಾದುದು. ಭಾರತೀಯ ಅಭಿವೃದ್ಧಿ ಮಾದರಿಯು ಕೃಷಿ ಕೇಂದ್ರಿತವಾಗಿರುವಂತೆಯೇ ಗ್ರಾಮ ಕೇಂದ್ರಿತವಾಗಿರಬೇಕಾದುದು ಅವಶ್ಯಕ.

ಉತ್ಪಾದನಾ ತಂತ್ರಗಳು ಮುಖ್ಯವಾಗಿ ಎರಡು ವಿಧ

೧) ಭಾರೀ ಪ್ರಮಾಣದ ಉತ್ಪಾದನೆ (Mass Production)ಮತ್ತು

೨) ಪ್ರೊಡಕ್ಷನ್ ಬೈ ದ ಮಾಸಸ್

ಮೊದಲನೆಯದರಲ್ಲಿ ಕೆಲವೇ ಜನಗಳು ಭಾರೀ ಯಂತ್ರೋಪಕರಣಗಳು, ಆಧುನಿಕ ತಂತ್ರಜ್ಞಾನ ಹಾಗೂ ಭಾರೀ ಬಂಡವಾಳ ಬಳಸಿ ಬೃಹತ್ ಪ್ರಮಾಣದಲ್ಲಿ ಸರಕುಗಳನ್ನು ಉತ್ಪಾದಿಸುತ್ತಾರೆ. ಇದು ಪಾಶ್ಚಿಮಾತ್ಯ ವಿಧಾನ. ಇದರಲ್ಲಿ ಆದಾಯ ಕೇಂದ್ರೀಕರಣವಾಗುತ್ತದೆ. ಆದರೆ ಉದ್ಯೋಗ ನಿರ್ಮಾಣವಾಗುವುದಿಲ್ಲ.

ಭಾರತಕ್ಕೆ ಈ ವಿಧಾನ ಖಂಡಿತಾ ಸೂಕ್ತವಲ್ಲ. ಭಾರತವನ್ನು ಸಹಸ್ರಾರು ವರ್ಷಗಳಿಂದಲೂ ಮುನ್ನಡೆಸುತ್ತಾ ಬಂದಿರುವುದು ಪ್ರೊಡಕ್ಷನ್ ಬೈ ದ ಮಾಸಸ್ ತಂತ್ರ. ಇಲ್ಲಿ ಕೋಟ್ಯಾನುಕೋಟಿ ಜನಗಳು ಸಣ್ಣ ಬಂಡವಾಳದೊಂದಿಗೆ, ಸಾಧಾರಣ ತಂತ್ರಜ್ಞಾನ ಬಳಸಿಕೊಂಡು ಸಣ್ಣ ಸಣ್ಣ ಉತ್ಪಾದನಾ ಘಟಕಗಳಲ್ಲಿ ಸರಕುಗಳನ್ನು ಉತ್ಪಾದಿಸುತ್ತಾರೆ. ನಮ್ಮ ಕೃಷಿ,

ಪಶುಪಾಲನೆ, ಗೃಹ ಕೈಗಾರಿಕೆಗಳು, ಚಿಲ್ಲರೆ ವ್ಯಾಪಾರ ಮುಂತಾದವು ಇಂದಿಗೂ ಒಳ್ಳೆಯ ಉದಾಹರಣೆಗಳು.

ಭಾರತ, ಬಹಳ ಪುರಾತನ ಕಾಲದಿಂದ ಇಂದಿನವರೆಗೂ ಪ್ರೊಡಕ್ಷನ್ ಬೈ ದ ಮಾಸಸ್ ವಿಧಾನದಲ್ಲೇ ಬೆಳೆದು ಬಂದಿದೆ. ಅಲ್ಲದೆ ಈ ವಿಧಾನದ ಅನುಕೂಲಗಳೆಂದರೆ,

೧) ದೊಡ್ಡ ಪ್ರಮಾಣದಲ್ಲಿ ವೈವಿಧ್ಯಮಯ ಉದ್ಯೋಗಗಳು ಸೃಷ್ಟಿಯಾಗುತ್ತವೆ. ಭಾರತದಂಥ ಜನಭರಿತ ದೇಶಕ್ಕೆ ಇದು ತುಂಬಾ ಅನುಕೂಲ.

೨) ಆದಾಯ ಕೇಂದ್ರೀಕರಣವಾಗುವ ಬದಲು ಕೋಟ್ಯಾಂತರ ಕೈಗಳಲ್ಲಿ ಹಂಚಿಕೆಯಾಗುತ್ತದೆ. ಅಂದರೆ, ವಿಕೇಂದ್ರೀಕೃತ ಆರ್ಥಿಕ ವ್ಯವಸ್ಥೆ ನಿರ್ಮಾಣವಾಗುತ್ತದೆ. ಆರ್ಥಿಕ ಸುಸ್ಥಿರತೆಗೆ ಇದು ಪೂರಕವಾಗುತ್ತದೆ.

೩) ಆದಾಯ ಮತ್ತು ಸಂಪತ್ತು ಹೆಚ್ಚು ಸಮಾನವಾಗಿ ಹಂಚಿಕೆಯಾಗುವುದರಿಂದ, ಆರ್ಥಿಕ ಮತ್ತು ಸಾಮಾಜಿಕ ಸಮಾನತೆ ಸಾಧ್ಯವಾಗುತ್ತದೆ.

೪) ನಗರೀಕರಣದ ಸಮಸ್ಯೆ ಉಂಟಾಗುವುದಿಲ್ಲ. ಬದಲಾಗಿ, ದೇಶದ ಎಲ್ಲಾ ಭಾಗಗಳೂ ಸಮಾನವಾಗಿ ಅಭಿವೃದ್ಧಿ ಹೊಂದುತ್ತವೆ.

ಈ ಕಾರಣಗಳಿಂದ ಭಾರತೀಯ ಅಭಿವೃದ್ಧಿ ಮಾದರಿಯು ಮಾಸ್ ಪ್ರೊಡಕ್ಷನ್ ತಂತ್ರಕ್ಕಿಂತಾ ಪ್ರೊಡಕ್ಷನ್ ಬೈ ದ ಮಾಸಸ್ ತಂತ್ರಕ್ಕೆ ಅತಿ ಹೆಚ್ಚಿನ ಮಹತ್ವ ನೀಡಬೇಕು.

ಭಾರತ ಬಹಳ ಪುರಾತನ ಕಾಲದಿಂದಲೂ ಜನಭರಿತ ದೇಶವಾಗಿದೆ. ಇಂದು ಅದು ಜಗತ್ತಿನ ಎರಡನೆ ಅತ್ಯಂತ ದೊಡ್ಡ ಜನಸಂಖ್ಯೆ ಹೊಂದಿರುವ ದೇಶವಾಗಿದೆ. ದುಡಿಯುವ ವಯಸ್ಸಿನಲ್ಲಿರುವ ಎಲ್ಲರಿಗೂ ಉತ್ಪಾದಕ ಉದ್ಯೋಗಗಳನ್ನು ಒದಗಿಸುವುದು ಅತ್ಯಂತ ಅಗತ್ಯ. ಆಗ ಮಾತ್ರ ಜನಸಂಪತ್ತಿನ ಸದ್ಬಳಕೆ ಸಾಧ್ಯವಾಗುತ್ತದೆ. ಆದ್ದರಿಂದ ಭಾರತೀಯ ಅಭಿವೃದ್ಧಿ ಮಾದರಿಯು, ಉದ್ಯೋಗ ಸೃಷ್ಟಿಗೆ ಹೆಚ್ಚಿನ ಪ್ರಧಾನ್ಯತೆ ನೀಡಬೇಕು.

ಎಲ್ಲಾ ಜಾತಿ ಹಾಗೂ ವರ್ಗಗಳ ಆರ್ಥಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಉನ್ನತಿ ಭಾರತೀಯ ಅಭಿವೃದ್ಧಿ ಮಾದರಿಯ ಉದ್ದೇಶವಾಗಬೇಕು. ನಾವು ಅಂತ್ಯೋದಯದಿಂದ ಪ್ರಾರಂಭಿಸಿ, ಸರ್ವೋದಯದ ಕಡೆಗೆ ಸಾಗಬೇಕು.

ಪಾಶ್ಚಾತ್ಯ ಚಿಂತನೆಯಲ್ಲೇ ಮುಳುಗಿ ಹೋಗಿರುವ ಹಾಗೂ ಅದಕ್ಕೆ ಪರ್ಯಾಯವೇ ಇಲ್ಲ ಎಂದು ದೃಢವಾಗಿ ನಂಬಿರುವ ಭಾರತೀಯ ಶಿಕ್ಷಿತ ಜನತೆಯನ್ನು ಆ ಗುಂಗಿನಿಂದ ಹೊರ ತರುವುದು ಶಿಕ್ಷಣದಿಂದ ಮಾತ್ರ ಸಾಧ್ಯ. ಪಾಶ್ಚಾತ್ಯ ಅಭಿವೃದ್ಧಿ ಮಾದರಿಗೆ ಪರ್ಯಾಯವಾದ ಹಾಗೂ ಉತ್ತಮವಾದ ಅಭಿವೃದ್ಧಿ ಮಾದರಿಯ ಬಗ್ಗೆ ಚಿಂತಿಸುವವರಿಗೆ ಕೆಲವು ಪ್ರಾರಂಭಿಕ ಮಾನಸಿಕ ಸಿದ್ಧತೆಗಳು ಅಗತ್ಯ ಎಂದು ಋಷಿ ಸಮಾನರಾದ

ಶ್ರೀ ದತ್ತೋಪಂತ್ ಥೇಂಗಡಿ ಯವರು ತಮ್ಮ ಪ್ರಸಿದ್ಧ ಗ್ರಂಥ 'Third Way' ಯಲ್ಲಿ ತಿಳಿಸುತ್ತಾರೆ. ಅವುಗಳೆಂದರೆ,

೧) 'ಪಾಶ್ಚಾತ್ಯೀಕರಣವೇ ಆಧುನೀಕರಣ' ಎಂಬುದನ್ನು ನಾವು ನಂಬಬಾರದು.

೨) ಗುರುದೇವ ರವೀಂದ್ರನಾಥ ಟ್ಯಾಗೂರರು ಹೇಳುವಂತೆ, ದೇವರು ಬೇರೆ ಬೇರೆ ದೇಶಗಳಿಗೆ ಬೇರೆ ಬೇರೆ ಪ್ರಶ್ನೆಪತ್ರಿಕೆಗಳನ್ನು ಕೊಟ್ಟಿದ್ದಾನೆ. ಆದ್ದರಿಂದ ಉತ್ತರಗಳನ್ನು ನಕಲು ಮಾಡುವುದರಿಂದ ಪ್ರಯೋಜನವಿಲ್ಲ. ಹಾಗೆಯೇ ಪಾಶ್ಚಾತ್ಯ ಅಭಿವೃದ್ಧಿ ಮಾದರಿಯನ್ನು ಕುರುಡು ಕುರುಡಾಗಿ ನಕಲು ಮಾಡುವುದು ಭಾರತಕ್ಕೆ ಒಳ್ಳೆಯದಲ್ಲ. ನಮಗೆ ಸೂಕ್ತವಾದ ಅಭಿವೃದ್ಧಿ ಮಾರ್ಗವನ್ನು ನಾವೇ ಕಂಡುಕೊಳ್ಳಬೇಕು.

೩) ಪಶ್ಚಿಮದಿಂದ ಬಂದದ್ದೆಲ್ಲಾ ಶ್ರೇಷ್ಠ ಎಂದು ಹೇಗೆ ನಾವು ನಂಬಬಾರದೋ, ಪಶ್ಚಿಮದಿಂದ ಬಂದದ್ದನ್ನೆಲ್ಲಾ ತಿರಸ್ಕರಿಸಬೇಕು ಎಂಬುದೂ ತರವಲ್ಲ. ನಮ್ಮ ಇತಿಹಾಸ, ಸಂಸ್ಕೃತಿ ಹಾಗೂ ಜೀವನ ಮೌಲ್ಯಗಳ ಬೆಳಕಿನಲ್ಲಿ ಪಾಶ್ಚಾತ್ಯ ಚಿಂತನೆಗಳಲ್ಲಿ ಯಾವುದನ್ನು ತಿರಸ್ಕರಿಸಬೇಕು ಎಂಬುದನ್ನು ನಾವೇ ನಿರ್ಧರಿಸಬೇಕು. ಪಶ್ಚಿಮದ ಅಂಧ ಅನುಕರಣೆ ನಮ್ಮ ದೇಸಿ ಪ್ರತಿಭೆಯ ದಿವಾಳಿತನವನ್ನು ಅಥವಾ ವಿಪರೀತವಾದ ಕೀಳರಿಮೆಯನ್ನು ತೋರಿಸುತ್ತದೆ.

ನಮ್ಮ ಶಿಕ್ಷಣ ವ್ಯವಸ್ಥೆ, ಇಂಥ ಮಾನಸಿಕ ಸಿದ್ಧತೆಗಳನ್ನು ಒದಗಿಸಲು ಸನ್ನದ್ಧವಾಗಬೇಕು. ಪಾಶ್ಚಿಮಾತ್ಯ ಬೌದ್ಧಿಕ ಹಾಗೂ ಮಾನಸಿಕ ಸಂಕೋಲೆಗಳಿಂದ ಭಾರತೀಯರನ್ನು ಮುಕ್ತಗೊಳಿಸಬೇಕು.

ಭಾರತೀಯ ಅಭಿವೃದ್ಧಿ ಮಾದರಿ ಇಂಥ ಶಿಕ್ಷಣ ವ್ಯವಸ್ಥೆಯನ್ನು ನಿರ್ಮಿಸಬೇಕು.

ಪಾಶ್ಚಾತ್ಯ ಅಭಿವೃದ್ಧಿ ಮಾದರಿಯಲ್ಲಿ 'ಅಭಿವೃದ್ಧಿ' ಎಂಬುದು ಕೇವಲ ಆರ್ಥಿಕ ಕ್ಷೇತ್ರಕ್ಕೆ ಅನ್ವಯವಾಗುತ್ತದೆ. ಇದು ಸರಿಯಲ್ಲ. ಅಭಿವೃದ್ಧಿ ಎಂಬುದು ಆರ್ಥಿಕ, ಸಾಮಾಜಿಕ, ರಾಜಕೀಯ, ಪಾರಿಸರಿಕ, ಸಾಂಸ್ಕೃತಿಕ ಮುಂತಾದ ಎಲ್ಲಾ ಆಯಾಮಗಳನ್ನು ಒಳಗೊಳ್ಳಬೇಕು.

ಭಾರತೀಯ ಅಭಿವೃದ್ಧಿ ಮಾದರಿಯು ಇಂಥ ಸರ್ವಾಂಗೀಣ ಅಭಿವೃದ್ಧಿಯ ಗುರಿ ಹೊಂದಿರಬೇಕು.

ಸಾಬಾರ : ಉತ್ಥಾನ

ಯಂತ್ರಗಳು ಆತ್ಮಸಾಕ್ಷಿಯನ್ನು ಮೊಂಡಾಗಿಸುತ್ತವೆ

– ಎಸ್.ಮಂಜುನಾಥ್

ನಾವು ಚಿಕ್ಕವರಿದ್ದಾಗ ಅದೃಷ್ಟವಂತರಾದವರ ಬಳಿ ಒಂದು ಆಟದ ವಸ್ತುವಿರುತ್ತಿತ್ತು. ಅದೊಂದು ರೀತಿಯ ಚಕ್ರ. ದರ್ಜಿಗಳ ದಾರದ ಉಂಡೆ ಅದು, ಮರದ್ದು. ಅದರ ಮಧ್ಯದ ಕಿಂಡಿಯೊಳಕ್ಕೆ ಸೈಕಲ್ ಟ್ಯೂಬಿನಿಂದ ಕತ್ತರಿಸಿಕೊಂಡ ಒಂದು ರಬ್ಬರ್ ಬ್ಯಾಂಡನ್ನು ತೂರಿಸಿ, ಅದಕ್ಕೆ ಚಕ್ರದ ಎರಡು ಬದಿಗೂ ಕಡ್ಡಿ ಹಾಕಿ ತಿರುಪಿ ನೆಲದ ಮೇಲೆ ಬಿಟ್ಟರೆ ಅದು ಅಷ್ಟು ದೂರ ಓಡುತ್ತಿತ್ತು. ನಮ್ಮ ಪಾಲಿಗೆ ಆ ಚಮತ್ಕಾರ ಆಶ್ಚರ್ಯ – ಸಂತೋಷ ಕೊಡುತ್ತಿತ್ತು!

ಆನಂತರ ಸಂತೆಯಲ್ಲಿ ಜಾತ್ರೆಯಲ್ಲಿ ಸ್ಪ್ರಿಂಗ್‌ನಿಂದ ನಡೆಯುವ ಆಟದ ಸಾಮಾನುಗಳು ಸಿಗುತ್ತಿದ್ದವು. ಒಂದು ಕೊಂತ ಒತ್ತಿದರೆ ಎರಡು ಬಾತುಕೋಳಿಗಳು ಸರದಿಯ ಮೇಲೆ ನಡುವಿನ ಮೀನು ಕುಕ್ಕುವ, ಮುದುಡಿದ ಕಮಲ ಬಿರಿದು ನಡುವೆ ಒಂದು ಹುಡುಗಿ ಸುತ್ತುವ, ಯೋಧನೊಬ್ಬನ ಟ್ಯಾಂಕರ್ ಚಲಿಸುವ – ಈ ಬಗೆಯ ಖುಷಿಕೊಡುವ ವಸ್ತುಗಳು. ಅವು ಯಾವುವೂ ನಮ್ಮ ಬುದ್ಧಿಮತ್ತೆಯನ್ನು ಬಹಳ ಮೀರಿದ್ದಾಗಿರಲಿಲ್ಲ. ಸ್ವಲ್ಪ ಮನಸ್ಸು ಮಾಡಿದರೆ ನಾವೂ ಅವುಗಳ ತಂತ್ರವನ್ನು ತಿಳಿಯಬಹುದಿತ್ತು. ನಮ್ಮ ಬಾಲ್ಯದಲ್ಲಿ ಅದಕ್ಕೆ ಮೀರಿದ ಬ್ಯಾಟರಿ ಸೆಲ್‌ನ, ಅಥವಾ ರಿಮೋಟ್ ಕಾರಿನಂಥ ಸರ್ಕ್ಯೂಟ್‌ನ ಆಟದ ವಸ್ತುಗಳಿರುತ್ತಿರಲಿಲ್ಲ. ಇನ್ನು ಈಗ ಮಕ್ಕಳು (ದೊಡ್ಡವರೂ) ಮೊಬೈಲು ಕಂಪ್ಯೂಟರುಗಳಲ್ಲಿ ಆಡುವ 'ಗೇಮ್'ಗಳ ಊಹೆಯೂ ಇರಲಿಲ್ಲ.

ನನ್ನ ಗೆಳೆಯರೊಬ್ಬರ ಮನೆಯಲ್ಲಿ ಅವರ ಮಗ ಕಂಪ್ಯೂಟರ್ ಕ್ರಿಕೆಟ್ ಆಡುತ್ತಿದ್ದ. "ನೀವೂ ಆಡಿ" ಎಂದು ನನಗಂದ. ನೀನು ಅಲ್ಲಿ ಕ್ರಿಕೆಟ್ ಆಡುತ್ತಿದ್ದೀನಿ ಅಂದುಕೊಂಡಿದ್ದೀಯ, 'ನೀನು ಆಡುತ್ತಿರೋದನ್ನೇ ನಾನು ಆಡುತ್ತಿದ್ದೀನಿ ಎಂದು ನಾನಂದುಕೊಂಡುಬಿಡುತ್ತೀನಿ' ಎಂದೆ.

ಊಟವಾದ ಮೇಲೆ ಒಬ್ಬ ತಾವೋ ಸಂತನಿಗೆ ತನ್ನ ನಿದ್ದೆ ತಾನೇ ಮಾಡಬೇಕಲ್ಲಾ ಎಂದು ಅಚ್ಚರಿಯಾಗಿದ್ದು ನೆನಪಿಗೆ ಬರುತ್ತಿದೆ. ಅಂದರೆ ನಮ್ಮ ಬದುಕಿಗೆ ಬದಲೀ ವ್ಯವಸ್ಥೆಯಿಲ್ಲ, ಅದನ್ನು ನಾವೇ ನೇರವಾಗಿ ಬದುಕಬೇಕು ಎಂಬುದೂ. ಆದರೆ ಆಧುನಿಕ ತಂತ್ರಜ್ಞಾನ ಮನುಷ್ಯನಿಗೆ ಆ ತಾಪತ್ರಯ ತಪ್ಪಿಸುವಂತೆ

ಕಾಣುತ್ತಿದೆ, ನಮ್ಮ ಬದುಕನ್ನು ಅದು ನಮಗಾಗಿ ತಾನೇ ಬದುಕಿ. ಅತ್ಯಾಧುನಿಕ ಮನುಷ್ಯನಿಗೂ ಈಗ ನಿಗವಾದ ನಿಜಕ್ಕಿಂತ ಭ್ರಮಾತ್ಮಕ ನಿಜವೇ ಹೆಚ್ಚೆನಿಸಿರುವಂತಿದೆ. ಮತ್ತು ಮೊದಲು ಹೇಳಿದಂತೆ ನಮ್ಮ ಬುದ್ಧಿಮತ್ತೆಯನ್ನೇ ಮೀರಿದ ತಂತ್ರಜ್ಞಾನ ಸಹಜವಾಗಿ ಕೆಲವೇ ಜನರ ಸ್ವತ್ತಾಗಿ ನಮ್ಮನ್ನು ಬರೀ ಅದರ ಗ್ರಾಹಕರನ್ನಾಗಿ ಉಳಿಸುತ್ತದೆ, ಬಳಸುತ್ತದೆ.

ಮಕ್ಕಳ ಆಟದ ಚಕ್ರದ ಬಗ್ಗೆ ಹೇಳಿದೆ. ಅಲ್ಲಿಂದ ಎತ್ತಿನ ಗಾಡಿ ಸಹಜವಾದ ಹಂತವೇ. ಎತ್ತಿನ ಗಾಡಿಯ ಅಂದ, ಅದರ ಸವಾರಿಯ ಸುಖವನ್ನು ನಾವಂತೂ ಬಲ್ಲೆವು. ನಮ್ಮ ನಂತರದವರಿಗೆ ಅದು ಗೊತ್ತಿದೆಯೋ ಇಲ್ಲವೋ. ನಗರ ಪ್ರದೇಶದವರಿಗಂತೂ ಸುತರಾಂ ಗೊತ್ತಿರದು. ಎತ್ತು-ಗಾಡಿ ಹೊಡೆಯುವ ಮನುಷ್ಯ-ಚಕ್ರ-ಕೂತವರು ಎಲ್ಲಾ ಒಂದೇ ಜೀವವೆಂಬಂತೆ ಇಡೀ ಚಿತ್ರಕ್ಕೇ ಒಂದು ಇಡಿತನವಿರುತ್ತಿತ್ತು. ಅದು ಅದರ ಸೌಂದರ್ಯ ಮತ್ತು ಎತ್ತಿನ ಗಾಡಿಯ ಸವಾರಿಯ ಕಷ್ಟಮಿಶ್ರಿತ ಸುಖ! ಅದರ ವೇಗ-ಮನುಷ್ಯ ಓಡಬಹುದಾದ ವೇಗಕ್ಕಿಂತ ಹೆಚ್ಚಿಗಿರದೆ, ಜೀವನದ ಸಹಜಗತಿಯನ್ನು ಉದ್ವಸ್ತಗೊಳಿಸದಂತಿರುತ್ತಿತ್ತು. ಬದುಕಿನ ಸೌಂದರ್ಯ ಮತ್ತು ಸಮಾಧಾನವನ್ನು ಹೆಚ್ಚಿಸುವಂತಯೇ ಇರುತ್ತಿತ್ತು - ಆ ಸರಳ ವಾಹನ. ಮನುಷ್ಯನ ಬಗ್ಗೆ ಪ್ರೀತಿಯುಳ್ಳ ಆದರೆ ಅವನ ಅರಿಷಡ್ವರ್ಗಗಳನ್ನು ಕೆರಳಿಸದ ಸೈಕಲ್, ಹೊಲಿಗೆ ಯಂತ್ರ, ಹಿಟ್ಟಿನ ಗಿರಣಿ - ಇಂಥ ಯಂತ್ರಗಳಲ್ಲಿ ಅದೇ ಸೌಂದರ್ಯ ಕಾಣುತ್ತದೆ.

ಆದರೆ ಈಗಲೋ ವೇಗವೆಂಬುದು ವೇಗವನ್ನೇ ಮೀರಿ ಹೋಗಿದೆ. ಆವೇಗವಾಗಿದೆ. ಆ ವೇಗ ಕೊಂಚ ಕಮ್ಮಿಯಾದರೂ ಅನೇಕರಿಗೆ ಹುಚ್ಚೇ ಹಿಡಿಯುಬಹುದಾದಂತಿದೆ. ಅತೀ ವೇಗವಾಗಿ ಹೋಗಿ ನಾವು ತಲುಪ ಬೇಕೆಂದಿರುವುದಾದರೂ ಎಲ್ಲಿಗೆ? ಮನುಷ್ಯನ ಅಂತಿಮ ಗಮ್ಯ ಎಲ್ಲರಿಗೂ ಗೊತ್ತೇ ಇದೆ. ಕಾಲ್ನಡಿಗೆಯ ನಿಧಾನಕ್ಕೆ ಬದುಕು ಎಷ್ಟೊಂದು ತೆರೆದು ತೋರುತ್ತದೆ! ತಂತ್ರಜ್ಞಾನದ ಪ್ರಗತಿಯ ಹೆಸರಲ್ಲಿ ಏನನ್ನೂ ಗಮನಿಸಲಾಗದೆ ಗಿರ್ರ್ ಎಂದು ತಲೆಸುತ್ತಿದಂತೆ ನಾವು ಕ್ಷಣಿಕವಾದ ಬದುಕನ್ನು ಅರೆಕ್ಷಣ ಮಾಡಿಕೊಂಡುಬಿಡುತ್ತೇವೆ.

ತಾವೋನಲ್ಲಿ ಒಂದು ಅರ್ಥಪೂರ್ಣವಾದ ಕಥೆಯಿದೆ. ಒಬ್ಬ ಕೊಡದಿಂದ ನೀರನ್ನು ಬಾವಿಯಿಂದ ತಂದು ತಂದು ಗಿಡಗಳಿಗೆ ಹಾಕುತ್ತಿದ್ದ. ಆಗ ಆ ಕಡೆ ಬಂದಂಥ ಅನೇಕ ಊರು ಸುತ್ತಿದವ ಹೇಳುತ್ತಾನೆ - 'ಅಯ್ಯೋ ಇಷ್ಟೇಕೆ ಕಷ್ಟ ಪಡುತ್ತೀ, ನಾನು ಅಲ್ಲೊಂದು ಊರಿನಲ್ಲಿ ನೋಡಿದೆ, ದೊಡ್ಡದೊಂದು ಗಳುವನ್ನು ಮರದ ತುಂಡಿನ ಮೇಲೇರಿಸಿ ಅದರ ತುದಿಗೆ ಕೊಡ ಕಟ್ಟಿ, ಇವನು ಕಾಲಿಂದ ಒತ್ತಿ

ನೀರು ಮೊಗೆದು ಸುಲಭವಾಗಿ ಗಿಡಕ್ಕೆ ಸುರಿಯುವುದನ್ನು. ನಿನ್ಯಾಕೆ ಹಾಗೆ ಮಾಡಬಾರದು?'

ಮೊದಲಿನವ ಹೇಳುತ್ತಾನೆ–'ಗೊತ್ತು ನನಗದು. ಅದಕ್ಕೆ ಯಾತ ಎನ್ನುತ್ತಾರೆ. ಗೊತ್ತಿದ್ದೂ ನನಗದು ಬೇಡ ಎಂದು ಬಿಟ್ಟಿದ್ದೇನೆ. ನಮ್ಮ ಕೆಲಸಕಾರ್ಯಗಳಲ್ಲಿ ನಾವು ತಂತ್ರ ಬಳಸಿದರೆ ನಮ್ಮ ಹೃದಯ ತಂತ್ರಿಯಾಗುತ್ತದೆ. ಅದರಿಂದ ಸ್ವಭಾವ ನಾಶವಾಗುತ್ತದೆ. ಕೊನೆಗೆ ಅದು ದುರಂತಕ್ಕೇ ಕಾರಣವಾಗುತ್ತದೆ. ಹಾಗಾಗಿ ನಿನ್ನ ಪಾಡಿಗೆ ನೀನು ಹೋಗು'.

ಶ್ರಮ ನರಕ, ಸೌಲಭ್ಯ ಸ್ವರ್ಗ ಎಂಬ ಮಿಥ್ಯೆ ನಮ್ಮನ್ನು ಅಮರಿಕೊಂಡಿದೆ. ಒಂದು ಮಿತಿಯೊಂಗೆ ಅದು ಸರಿ ಕೂಡ. ಆದರೆ ಶೂನ್ಯಶ್ರಮಕ್ಕಿಂತಲೂ ಇನ್ನೂ ಇನ್ನೂ ಸೌಲಭ್ಯ ಜಾಸ್ತಿಯಾಗುತ್ತ ಮನುಷ್ಯನ ಮನುಷ್ಯತ್ವ ಮತ್ತು ಅವನ ಪ್ರಾಣಿತ್ವಕ್ಕೂ ಸಂಚಕಾರ ತರುವಂತಿದೆ. ಹಸಿವಿಗೊಂದು ಮಾತ್ರೆ, ಜೀರ್ಣಕ್ಕೊಂದು, ನಿದ್ರೆಗೊಂದು, ಪ್ರೇಮಕ್ಕಿನ್ನೊಂದು, ಎಲ್ಲಾ ಭಾವನೆಗಳಿಗೂ ಒಂದೊಂದು..

ನಿಸರ್ಗದಲ್ಲಿರುವ ಒಂದು ಮಹಾನ್ ಶಾಸನವನ್ನು ನಾವು ಮರೆತಿದ್ದೇವೆ. ಅದೇಂದರೆ ಸುಖ ಸೌಲಭ್ಯ ಜಾಸ್ತಿಯಾದಷ್ಟೂ ನಮ್ಮ ಅನುಭವಿಸುವ ಸಾಮರ್ಥ್ಯ ಕುಗ್ಗುತ್ತದೆಂಬುದು. ಈಗಾಗಲೇ ನಾವು ಎಷ್ಟೊಂದು ಯಂತ್ರಗಳಿಂದ ಆವೃತರಾಗಿದ್ದೇವೆ, ಆಕ್ರಮಿತರಾಗಿದ್ದೇವೆ! ನಾವು ಅವುಗಳ ಧಣಿಗಳು ಎಂದು ತಿಳಿಯುತ್ತಲೇ ಅವುಗಳ ಗುಲಾಮರಾಗಿದ್ದೇವೆ. ನಮಗಾಗಿ ಅವು ಅಲ್ಲ, ನಿಜಕ್ಕೂ ಅವುಗಳಿಗಾಗಿ ನಾವು! ಫೌಸ್ಟ್ ಮೆಫಿಸ್ಟೋಫಿಲಿಸ್‌ಗೆ ರಕ್ತದ ಬಾಂಡ್‌ನಲ್ಲಿ ತಾತ್ಕಾಲಿಕವಾದ ಭೋಗ ಮತ್ತು ಶಕ್ತಿಗಾಗಿ ತನ್ನ ಆತ್ಮವನ್ನು ಒತ್ತೆಯಿಟ್ಟಂತೆ ಆಗಿದೆ. ಮತ್ತು ಮೆಫಿಸ್ಟೋಫಿಲಿಸ್ ತನಗೆ ಸಂದಾಯವಾಗಬೇಕಾದ ನಮ್ಮ ಆತ್ಮದ ವಸೂಲಿಗೆ ಬಂದೇ ಬರುತ್ತಾನೆ.

ನಾವು ಯಾವುದರೊಂದಿಗಿದ್ದೇವೋ ನಿಧಾನವಾಗಿ ಅದಂತಾಗುವುದನ್ನು ತಪ್ಪಿಸಲಾರೆವು. ಅಂದರೆ ಈಗ ನಾವೂ ಬಹುಪಾಲು ಯಂತ್ರವೇ ಆಗಿದ್ದೇವೆ. ಸೃಜನಶೀಲತೆಯಲ್ಲಿ ಅರಳಬೇಕಾದ ನಮ್ಮ ಬದುಕು ಒಂದೇ ವಿನ್ಯಾಸದ ನಾಗರೀಕ 'ಕೆರಿಯರ್' ಆಗಿಬಿಟ್ಟಿದೆ. ಬದುಕಿನ ಮಾಂತ್ರಿಕತೆಗೆ ಬದಲಾಗಿ ತಂತ್ರಜ್ಞಾನದ ಅಗ್ಗದ ದೊಂಬರಾಟಕ್ಕೆ ನಾವು ಒಲಿದಿದ್ದೇವೆ. ಯಂತ್ರದ ದಕ್ಷತೆ, ಯಂತ್ರದ ಶಿಸ್ತು, ಅದರ ನಿರ್ಭಾವ, ವಸ್ತುನಿಷ್ಟತೆ – ನಮ್ಮ ಆದರ್ಶವೂ ಆಗಿ ನಾವೂ ಅವುಗಳೊಂದಿಗೆ ಒಂದಾಗಲು ಸ್ಪರ್ಧೆಗಿಳಿದಿದ್ದೇವೆ! ಮನುಷ್ಯ ಚೇತನಕ್ಕಿಂತ ಮಿಗಿಲಾದ್ದು ಯಾವುದೂ ಇಲ್ಲ ಎಂಬ ನಂಬಿಕೆ ಹೋಗಿ, ಸರಳನಾದ ಬಡವನಾದ ಒಬ್ಬ ಮನುಷ್ಯ ಒಂದು ಜುಜುಬಿ ಯಂತ್ರಕ್ಕಿಂತ ನಮ್ಮ ಕಣ್ಣಲ್ಲಿ ಕಡಿಮೆಯಾಗಿದ್ದಾನೆ! ಇದನ್ನು ಯಾವ ದೇವರೂ

ಕ್ಷಮಿಸಲಾರ. ಮತ್ತು ಇದು ನಮ್ಮ ಜೀವನದ ಗುಣಾತ್ಮಕತೆ ಎಂದೂ ನಂಬಿದ್ದೇವೆ! ಯಂತ್ರಗಳು ನಮ್ಮ ಜೀವಕಾಮವನ್ನು ತಗ್ಗಿಸಿ ಆತ್ಮಕಾಮವನ್ನು ತೆಳು ಮಾಡುತ್ತವೆ ಎನ್ನುತ್ತಾರೆ ಕವಿ ಪುತಿನ. ಒಂದು ಮಾವಿನ ಹಣ್ಣಿಗಾಗಿ ಈಗ ಕಾಯಬೇಕಿಲ್ಲ, ಅದು ಯಾವಾಗ ಬೇಕಾದರೂ ಬಿಡುವಂತೆ ಮಾಡಬಲ್ಲದು ತಂತ್ರಜ್ಞಾನ. ಅದಕ್ಕಾಗಿ ಕಾಯುವಿಕೆ, ಆ ಹಂಬಲ, ಸಿಕ್ಕಾಗಿನ ತೃಪ್ತಿ ಎಲ್ಲಾ ಹೋಯಿತು. ನಮ್ಮ ಪ್ರವೃತ್ತಿಗಳನ್ನೂ ದುರ್ಬಲಗೊಳಿಸಿ, ಭಾವಮಯಕೋಶವನ್ನು ಕುಗ್ಗಿಸಿ ನಮ್ಮ ಮನಸ್ಸನ್ನು ಒಣಗಿಸುತ್ತದೆ ತಂತ್ರಜ್ಞಾನ. ಆಗ ಉಳಿಯುವ ನಮ್ಮ 'ಪ್ರಖರ' ವಾದ ಬುದ್ಧಿಗೆ ಲೋಕದ 'ಸತ್ಯ' ಗೊತ್ತಾಗುತ್ತದೆ. 'ಆ ಸತ್ಯ' ವೆಂಬ ಪದಾರ್ಥವನ್ನು ಬೇಕಾದರೆ ನಾವು ಜತನವಾಗಿ ಕಾಪಿಟ್ಟುಕೊಳ್ಳಬಹುದು – ಮರಣಾನಂತರದ ಉಪಯೋಗಕ್ಕಾಗಿ ಮಮ್ಮಿಗೆಂದು ಇರಿಸುತ್ತಿದ್ದ ಕೆಲ ವಸ್ತುಗಳಂತೆ.

ಯಂತ್ರಗಳು ನಮ್ಮ ಆತ್ಮಸಾಕ್ಷಿಯನ್ನೂ ಮೊಂಡಾಗಿಸುತ್ತವೆ. ಕಣ್ಣೆದುರೇ ಇರುವ ಅನೇಕ ಘೋರ ಸಂಗತಿಗಳ ಬಗ್ಗೆ ನಮಗೆ ಏನೂ ಅನ್ನಿಸುವುದಿಲ್ಲ. ನ್ಯಾಯ, ಸಮತೆಗಳ ಬಗ್ಗೆ ತುಡಿತ ತಗ್ಗುತ್ತದೆ. ಅದದೇ ಸರಕುಗಳನ್ನು ಬಳಸುತ್ತ ಇಡೀ ಜಗತ್ತೇ ಒಂದು ಕುಟುಂಬ ಎಂಬಂತೆ ಹೊರಗೆ ಕಂಡರೂ, ನಾನು ಸಮಷ್ಟಿಯ ಒಂದಂಶ ಎಂದು ಭಾವಿಸುವ ಒಳಚೈತನ್ಯವೇ ಉಡುಗಿರುತ್ತದೆ..

ನೈಲ್ ಕಟರ್, ಸ್ಟ್ಯಾಪ್ಲರ್, ಪಂಚಿಂಗ್ ಮೆಶಿನ್.. ಈ ಮಾಟಆದ ಪುಟ್ಟ ಯಂತ್ರಗಳೆಂದರೆ ನನಗಿಷ್ಟ; ಅವುಗಳಿಗೊಂದು ಚಂದವಿದೆ. ತಾವೋ ಗುರು ಚ್ವಾಂಗ್‌ತ್ಸು ಹೇಳುತ್ತಾನೆ: 'ಜೀವನದ ಸಣ್ಣ ಸಂಗತಿಗಳಲ್ಲಿ ಆಶ್ರಯ ಪಡಿ. ಅವುಗಳಲ್ಲಿ ಹೆಚ್ಚಿನ ಸಮಗ್ರತೆಯಿದೆ'. ನಮ್ಮ ಮನಸ್ಸು ಈ ಪುಟ್ಟ ಯಂತ್ರಗಳನ್ನು ತನ್ನ ಶಾಂತಿಗೆ, ಸ್ವರೂಪಕ್ಕೆ ಧಕ್ಕೆ ಬರದಂತೆ ಸಮಗ್ರವಾಗಿ ಗ್ರಹಿಸಬಲ್ಲದು.

ಅದೇ ಈಗ ಡೈನಾಸಾರ್‌ಗಳಂತೆ ಭೂಮಿ ಮೇಲೆ ಹರಿದಾಡುತ್ತಿರುವ ಜೇಸೀಬಿ ಎಂಬ ಯಂತ್ರಗಳೋ ಮಹಾಬಲಶಾಲಿ ಅಸುರನಂತಿವೆ. ಅಂಥವು ರಾತ್ರೋರಾತ್ರಿ ಅಗಾಧ ಭೂಮಿಯನ್ನು ಬಗೆಯಬಲ್ಲವು, ಗುಡ್ಡಗಳನ್ನು ನೆಲಸಮ ಮಾಡಬಲ್ಲವು, ಕಾಡಿಗೆ ಕಾಡನ್ನೇ ಸವರಬಲ್ಲವು.

ನಾನು ಊಹಿಸಿ ಬೆಚ್ಚುವ ದುಃಸ್ವಪ್ನವೆಂದರೆ ಈ ರಾಕ್ಷಸಯಂತ್ರಗಳು ಒಮ್ಮೆ ಜೀವತಳೆದು, ಯಾರ ಮಾತೂ ಕೇಳದೆ, ಎದುರು ಬಂದದ್ದನ್ನೆಲ್ಲ ನಾಶ ಮಾಡುತ್ತ ತಾರಾಡುತ್ತಿರುವುದು. ಅಥವಾ ಈಗಿರುವುದೂ ಹಾಗೇ, ಮನುಷ್ಯನ ನಿಯಂತ್ರಣ ನಮ್ಮ ಭ್ರಮೆಯಷ್ಟೇ ಇರಬಹುದು.

'ಇದೆಲ್ಲಾ ಸೈತಾನನ ಸೃಷ್ಟಿ'–ಅಂದ ಒಬ್ಬ ಧರ್ಮಿಷ್ಟ. ಆದರೆ ಸೈತಾನ

ದೇವರ ರೂಪದಲ್ಲಿ ಬಂದಿರುವ ಕಾಲ ಇದು. ಅವನ ಶಕ್ತಿ ಸಾಮರ್ಥ್ಯಗಳನ್ನು ನೋಡಿ ಅವನೇ ದೇವರು ಎಂದು ನಾವು ತಿಳಿದಿದ್ದೇವೆ. ಈಗ ದೇವರನ್ನು ನಂಬದೆ ಇರುವುದ ಸುಲಭ; ಯಂತ್ರಗಳನ್ನು ನಂಬದಿರುವವನು ನಾಸ್ತಿಕ, ಮತ್ತು ವಿಕ್ಷಿಪ್ತ. ಒಬ್ಬ ವ್ಯಕ್ತಿಗೆ ಅಥವಾ ಒಂದು ದೇಶಕ್ಕೆ ಮುಂದುವರೆಯುವುದು ಎಂದರೆ ಇನ್ನೇನೂ ಇಲ್ಲ, ಶ್ರೀಮಂತವಾಗುವುದ ಎಂದರ್ಥ. ವಿನಾಶಕಾರಿಕಾರಿಯಾದ ಈ ಉನ್ಮಾದ ಮನುಷ್ಯನ ತಲೆಯನ್ನು ಹೇಗೆ ಹೊಕ್ಕಿತೋ!

ಇಡೀ ಜಗತ್ತು ಅಥವಾ ಎಲ್ಲ ವ್ಯಕ್ತಿಗಳೂ ಶ್ರೀಮಂತವಾಗುವುದು ಸಾಧ್ಯವೂ ಇಲ್ಲ, ಅದನ್ನು ಯಾರಾದರೂ ಇಷ್ಟಪಡುವುದೂ ಅನುಮಾನ. ಹಗೆ ಅಸಾಧ್ಯವಾದ್ದರಿಂದ ಭೂಗೋಳದ ಜನಸಂಖ್ಯೆಯ ಒಂದು ಸ್ತರ ಮತ್ರ ಶ್ರೀಮಂತವಾಗಿ, ಜಗತ್ತು ಇಷ್ಟಗಲ ಮಾತ್ರ ರಂಗಾಗಿ ಹೊಳೆಯುತ್ತ ಉಳಿದ ಬಹುಪಾಲು ಕೊಳೆತ ಸೇಬಿನಂತೆ ಇರುತ್ತದೆ. ಜಗತ್ತಿನ ಬಡತನ ನೀಗಲು ತಂತ್ರಜ್ಞಾನ ಒದಗಿಸುವ ಸಮೃದ್ಧಿಯ ಅಗತ್ಯವಿದೆ ಎಂಬುದು ಒಂದು ಮಿಥ್ಯೆ. ತಂತ್ರಜ್ಞಾನವನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳುವ ಆರ್ಥಿಕ ಶಕ್ತಿಗಳು – ಈಗಿನ ಒಓಲಿಗಳು ತಾವು ಮಿತಿಮೀರಿ ಶ್ರೀಮಂತರಾಗುತ್ತವೆ ಅಷ್ಟೇ. ನಾವು ಕಾಣುತ್ತಿರುವಂತೆ ಬಡತನ ಹೆಚ್ಚುತ್ತಲೇ ಇದೆ ಮತ್ತು ಬಡತನ ಮೂಲತಃ ಸಾಪೇಕ್ಷವಾದುದು. ಮನುಷ್ಯನ ಅಹಂಕಾರ, ಅಭದ್ರತೆ, ಲೋಭಗಳು ಹೆಚ್ಚುವುದರಿಂದ ಸಂಗ್ರಹಬುದ್ಧಿ ಹೆಚುಚುತ್ತದೇ ಹೊರತು ಕಡಿಮೆಯಾಗದು. ಈ ಗುಣಗಳನ್ನು ಮಿತಿಮೀರಿ ಬೆಳೆಸುವ ತಂತ್ರಶಾಹಿ ಬಡತನ, ಹಿಂಸೆಗಳನ್ನು ಹೇಗಾದರೂ ಕಡಿಮೆಯಾಗಿಸೀತು? ವ್ಯಕ್ತಿಗಾಗಲೀ ದೇಶಗಳಿಗಾಗಲೀ ಆದರ್ಶ ಜೀವನವೆಂದರೆ ಯಾವುದು? ಸರಳತೆ, ಭೂಮಿಯನ್ನು ಬಹುವಾಗಿ ಶೋಷಿಸದ ಪರಿಮಿತಿ, ಅನ್ನವನ್ನು ವಿಷಮಾಡುವ ನಿಯತ್ತು, ಶ್ರಮದ ಬಗ್ಗೆ ಪ್ರೀತಿ, ಈ ಎಲ್ಲವುಗಳಿಂದಾಗಿ 'ಬದುಕು ಸಾವಿನ ನೆರಳು' ಎಂಬಂಥ ಭಯ ಕರಗಿ ಅಂತಃಕರಣ ಅರಳಿ ಇದು 'ಜೀವ ಜನುಮದ ಜಾತ್ರೆ' ಎಂದೂ ಒಂದು ಹಬ್ಬವೆಂದೂ ಅನಿಸುವುದು. ಇದೇ ಜೀವನದ ಬೆರಗು ಸಂತೋಷಗಳನ್ನು ವೃದ್ಧಿಸುವ ಒಂದು ಗಾಢವಾದ ಧಾರ್ಮಿಕ ಭಾವನೆ. ಕೊನೆಯಿರದ ಅಭಿವೃದ್ಧಿಯ ನಮ್ಮ ತಂತ್ರಜ್ಞಾನ ಪ್ರಣೀತ ನಾಗರೀಕ ಜೀವನ ಅಂಥ ಜೀವನ ಕ್ರಮವನ್ನು ಮಿಡೀವಲ್ ಎಂದು ಹಂಗಿಸುವ ಸ್ಥಿತಿಯೊಳಗೆ ಇಂದು ನಾವಿದ್ದೇವೆ. (ಸಾಭಾರ ಹೊಸ ಮನುಷ್ಯ)

ದೇಶದ ಪ್ರತಿಷ್ಠಿತರ ಚಿಂತನೆ ಎತ್ತ ಸಾಗಿದೆ?

-ಸುರೇಂದ್ರ ಕೌಲಗಿ

*(ಮೈಸೂರಿನಲ್ಲಿ ಜೆ.ಎಸ್.ಎಸ್ ಮಹಾ ವಿದ್ಯಾಪೀಠವು ೧೯೫೪ರಲ್ಲಿ ಸ್ಥಾಪಿತವಾಯಿತು. ಮಹಾವಿದ್ಯಾಪೀಠದ ಸ್ಥಾಪನೆಯ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಐದು ವಿಶೇಷ ಉಪನ್ಯಾಸಗಳಾದವು ಆ ಉಪನ್ಯಾಸಗಳು ಇಂತಿದ್ದವು; ನಂದನ್ ಎಂ.ನಿಲೇಕಣಿಯವರ: **"INDIA'S OPPORTUNITIES IN THE ERA OF GLOBALIZATION"**; ಡಾ.ಸ್ಯಾಮ್ ಪಿತ್ರೋಡರವರ: **"TOWARDS THE KNOWLEDGE SOCIETY : THE IMPERATIVES"**; ಪ್ರೊ.ಸಿ.ಎನ್.ಆರ್. ರಾವ್‌ರವರ:; **"INDIA AS A GLOBAL LEADER IN SCIENCE : A VISION FOR INDIA"**; ಸದ್ಗುರು ಜಗ್ಗಿ ವಾಸುದೇವ್‌ಜಿಯವರ **"TECHNOLOGIES AND WELL-BEING"**; ಡಾ.ಎ.ಪಿ.ಜೆ.ಅಬ್ದುಲ್ ಕಲಾಂರವರ **"LIVABLE PLANET EARTH"**; ಈ ಉಪನ್ಯಾಸಗಳನ್ನು ಪುಸ್ತಕರೂಪದಲ್ಲಿ ಜೆ.ಎಸ್.ಎಸ್.ಗ್ರಂಥಮಾಲೆ ಪ್ರಕಟಿಸಿದೆ. ಈ ಐದು ವಿಶೇಷ ಕೃತಿಗಳ ಲೋಕಾರ್ಪಣೆ ಕಳೆದ ನವೆಂಬರ್ ಹದಿನಾಲ್ಕರಂದು ನಡೆಯಿತು. ಆ ಸಂದರ್ಭದಲ್ಲಿ ಮಾಡಿದ ಭಾಷಣದ ಪೂರ್ತ ಪಾಠ ಇಲ್ಲಿದೆ.)*

ಜಗದ್ಗುರು ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳೇ, ದತ್ತಿ ಉಪನ್ಯಾಸ ಕೊಡಲಿರುವ ಸಹೋದರಿ ಡಾ? ಸುಧಾ ಮೂರ್ತಿಯವರೇ, ಅಧ್ಯಕ್ಷತೆವಹಿಸಿರುವ ಶ್ರೀ.ಬೆಟ್‌ಕೆರೂರ್‌ರವರೇ ಮತ್ತು ಸಭೆಯಲ್ಲಿ ಉಪಸ್ಥಿತರಿರುವ ಎಲ್ಲ ಸನ್ಮಾನ್ಯ ಮಹಿಳೆಯರೆ ಮತ್ತು ಮಹನೀಯರೆ. ಈ ದಿನ ನನ್ನ ಜೀವನದಲ್ಲಿ ಮರೆಯಲಾಗದ ದಿನ. ಜಗದ್ಗುರು ಡಾ? ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ನಮ್ಮ ದೇಶದ ಐದು ಪ್ರತಿಷ್ಠಿತ ವ್ಯಕ್ತಿಗಳ ಉಪನ್ಯಾಸಗಳ ಕೃತಿಗಳನ್ನು ಲೋಕಾರ್ಪಣೆ ಮಾಡುತ್ತಿರುವುದು ಒಂದು ಸೌಭಾಗ್ಯವೆಂದು ನಾನು ಭಾವಿಸಿದ್ದೇನೆ. ನನ್ನ ವಿದ್ಯಾಭ್ಯಾಸ, ನನ್ನ ಜೀವನಾನುಭವ ಮತ್ತು ನನ್ನ ಕಾರ್ಯಕ್ಷೇತ್ರಗಳನ್ನು ಗಮನಿಸಿ ನನಗೆ ದೊರೆತಿರುವ ಈ ಅವಕಾಶವನ್ನು ನೋಡಿದಲ್ಲಿ ಅದೊಂದು ಅಸಾಮಾನ್ಯ ಅವಕಾಶವೆಂದೇ ನನಗೆ ಅನಿಸುತ್ತದೆ. ಇಂಥ ಅಮೂಲ್ಯವಾದ ಅವಕಾಶವನ್ನು ಒದಗಿಸಿಕೊಟ್ಟ ಡಾ? ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳಿಗೆ ನನ್ನ ಹೃದಯಾಂತರಾಳದ ಕೃತಜ್ಞತೆಯನ್ನು ಸಮರ್ಪಿಸುತ್ತೇನೆ. ಅವರು ತೋರಿರುವ ವಿಶ್ವಾಸ ಮತ್ತು ಆತ್ಮೀಯತೆಗಾಗಿ ನಾನು ಚಿರಋಣಿ. ಪ್ರತಿಷ್ಠಿತ ಐದು ಮಹನೀಯರ ಕೃತಿಗಳನ್ನು ಲೋಕಾರ್ಪಣೆ ಮಾಡುತ್ತಾ ನಾನು ಹೇಳಲಿರುವ ಮಾತುಗಳನ್ನು ಎರಡು ಭಾಗಗಳಲ್ಲಿ ವಿಂಗಡಿಸಿದ್ದೇನೆ. ಮೊದಲನೆಯ ಭಾಗ ಆ ಐದು ಪ್ರತಿಷ್ಠಿತ ಮಹನೀಯರು ತಮ್ಮ ಉಪನ್ಯಾಸಗಳಲ್ಲಿ ಹೇಳಿರುವ ವಿಚಾರಗಳನ್ನು ತಿಳಿಸುತ್ತಾ ನನ್ನ ಸೂಕ್ಷ್ಮ ಪ್ರತಿಕ್ರಿಯೆ

ಹೇಳಿದ್ದೇನೆ. ಎರಡನೇ ಭಾಗದಲ್ಲಿ ಐದೂ ಉಪನ್ಯಾಸಗಳ ಪ್ರಭಾವದಿಂದ ಉಂಟಾದ ನನ್ನ ಅಭಿಪ್ರಾಯಗಳನ್ನು ತಿಳಿಸಿದ್ದೇನೆ.

ಇಂದು ಲೋಕಾರ್ಪಣೆಗೊಳ್ಳುತ್ತಿರುವ ಐದು ಉಪನ್ಯಾಸ ಕೃತಿಗಳು ಜಾಗತೀಕರಣದ ಯುಗದಲ್ಲಿ ಭಾರತ ಜಗತ್ತಿನಲ್ಲಿ ಮುಂಚೂಣಿ ದೇಶವಾಗಬೇಕಾದರೆ ಯಾವ ರೀತಿ ರೂಪುಗೊಳ್ಳಬೇಕು ಮತ್ತು ಯಾವ ರೀತಿಯಲ್ಲಿ ಹಾಗೂ ಯಾವ ಯಾವ ಕ್ಷೇತ್ರಗಳಲ್ಲಿ ಸಾಮರ್ಥ್ಯ ಬೆಳೆಸಿಕೊಳ್ಳಬೇಕೆಂಬುದನ್ನು ಒತ್ತಿ ಹೇಳಿವೆ. ಈ ಉಪನ್ಯಾಸಗಳ ಕನ್ನಡ ಅವತರಣಿಕೆ ಬರುವುದು ಅಗತ್ಯವಾಗಿದೆ. ಶ್ರೀ ಮಠವು ಈ ಕೆಲಸವನ್ನು ಮಾಡುತ್ತದೆಂಬ ವಿಶ್ವಾಸ ನನಗಿದೆ.

ನಂದನ್ ನಿಲೇಕಣಿಯವರು **"ಜಾಗತೀಕರಣದ ಯುಗದಲ್ಲಿ ಭಾರತಕ್ಕಿರುವ ಅವಕಾಶಗಳು"** ಎಂಬ ವಿಷಯವಾಗಿ ಮಾತನಾಡಿದ್ದಾರೆ. ಅವರು ತಮ್ಮ ಭಾಷಣದ ಉದ್ದಕ್ಕೂ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿರುವ ಅಪಾರ ಯಶಸ್ಸಿನ ಸಾಧ್ಯತೆಗಳ ಬಗ್ಗೆ ಮಾತನಾಡಿದ್ದಾರೆ. ಆದರೆ ಜಾಗತೀಕರಣದಿಂದ ಉಂಟಾಗುತ್ತಿರುವ ವೈವಿಧ್ಯತೆಗಳ ನಾಶ ಮತ್ತು ಆರ್ಥಿಕ ವ್ಯತ್ಯಾಸ ಮುಂತಾದ ಸಮಸ್ಯೆಗಳ ಬಗ್ಗೆ ಕರಾರುವಕ್ಕಾದ ಪರಿಹಾರವನ್ನು ಸೂಚಿಸುವಲ್ಲಿ ವಿಫಲರಾಗಿದ್ದಾರೆ. ಜಾಗತೀಕರಣವೆಂಬುದು ವಾಸ್ತವವಾಗಿರುವುದರಿಂದ ಮತ್ತು ನೈಜವಾಗಿರುವುದರಿಂದ ಅದನ್ನು ನಾವು ಒಪ್ಪಬೇಕು ಎಂದು ಹೇಳುತ್ತಾ ಪಾಶ್ಚಿಮಾತ್ಯೀಕರಣವೇ ಜಾಗತೀಕರಣವಲ್ಲ ಬದಲಿಗೆ ಪ್ರತಿಯೊಬ್ಬರದು ತಮ್ಮದೇ ವಿಶಿಷ್ಟ ಸಂಸ್ಕೃತಿ ಮತ್ತು ಮೌಲ್ಯಗಳನ್ನು ಇಟ್ಟುಕೊಂಡು ಜಾಗತಿಕ ಹಳ್ಳಿಯ ಭಾಗವಾಗಬೇಕೆಂದು ಹೇಳುತ್ತಾರೆ. ಇದು ಎಷ್ಟರ ಮಟ್ಟಿಗೆ ಕಷ್ಟ ಸಾಧ್ಯವೆಂಬುದು ನಮಗೆ ಈಗಾಗಲೇ ನಮ್ಮ ಇಂದಿನ ಯುವ ಪೀಳಿಗೆಯ ರೀತಿ - ನೀತಿ, ವೇಷ - ಭೂಷ - ಭಾಷೆಗಳನ್ನು ನೋಡಿದರೆ ಗೊತ್ತಾಗುತ್ತದೆ. ಅವರು ತಮ್ಮ ಭಾಷಣದಲ್ಲಿ ಭಾರತ ಇನ್ನೂ ಬಹುಮಟ್ಟಿಗೆ ಗ್ರಾಮ ಭಾರತವೇ ಆಗಿದೆ ಎಂಬುದನ್ನು ಗಮದಲ್ಲಿಟ್ಟುಕೊಂಡು ಜಾಗತೀಕರಣದಿಂದ ಗ್ರಾಮಗಳಿಗೆ ಹೇಗೆ ಪ್ರಯೋಜನಕಾರಿಯೆಂಬುದನ್ನು ಸಮರ್ಥವಾಗಿ ಹೇಳಿಲ್ಲ. ಬದಲಿಗೆ ಇನ್ನು ಮೇಲೆ ಪ್ರಪಂಚದಲ್ಲೆಲ್ಲಾ ನಗರೀಕರಣವಾಗುವುದು. ಈ ವಾಸ್ತವವನ್ನು ಒಪ್ಪುತ್ತ ಗ್ರಾಮಾಂತರ ಪ್ರದೇಶದಲ್ಲಿ ಉದ್ಯೋಗಗಳನ್ನು ನಾವು ಸೃಷ್ಟಿಸಬೇಕು ಎಂದು ಹೇಳುತ್ತ ಜಾಗತೀಕರಣದಲ್ಲಿಯ ವೈರುಧ್ಯತೆಯನ್ನು ಉಳಿಸುವ ಕಡೆಗೂ ಗಮನ ಹರಿಸಲು ಪ್ರಯತ್ನಿಸುತ್ತಾರೆ. ಆರ್ಥಿಕ ಕ್ಷೇತ್ರದಲ್ಲಿ ಕೂಡ ಅವರ ಮಾಹಿತಿ ತಂತ್ರಜ್ಞಾನದಲ್ಲಿಯ ವೈರುಧ್ಯತೆಯನ್ನು ಎತ್ತಿಹಿಡಿಯುತ್ತದೆ. ಜಾಗತೀಕರಣದ ಯುಗದಲ್ಲಿ ಭಾರತಕ್ಕಿರುವ ಅವಕಾಶಗಳನ್ನು ಅವರು ಎತ್ತಿ ಹಿಡಿಯುತ್ತಲೇ ಪಶ್ಚಿಮ ಘಟ್ಟಗಳ ಉಳಿಯುವಿಕೆಯ ಬಗ್ಗೆ ತಮ್ಮ ಗಂಭೀರ ಚಿಂತೆಯನ್ನು ಸಹ ವ್ಯಕ್ತಪಡಿಸುತ್ತಾರೆ. ಹೀಗೆ ನಂದನ್ ನೀಲೆಕಣಿಯವರ ಭಾಷಣ ಬಹಳಷ್ಟು ವೈರುಧ್ಯತೆಗಳಿಂದ ಕೂಡಿದ್ದಾಗಿದೆ.

ಡಾ.ಸ್ಯಾಮ್ ಪಿತ್ರೋಡರವರು **"ಜ್ಞಾನಾಧಾರಿತ ಸಮಾಜದತ್ತ ಕೈಗೊಳ್ಳಲೇಬೇಕಾದ ಕ್ರಮಗಳು"** ಎಂಬ ವಿಷಯವಾಗಿ ಮಾತನಾಡಿದ್ದಾರೆ. ೨೧ನೇ ಶತಮಾನ ವಿಜ್ಞಾನ ಮತ್ತು ತಂತ್ರಜ್ಞಾನದ ಆಸ್ಫೋಟನೆಯ ಯುಗವಾಗಿದೆ. ಭಾರತದ ಸನಾತನ ಸಂಸ್ಕೃತಿಯ ಜ್ಞಾನಯುಗ ಮುಗಿದು ೨೧ನೇ ಶತಮಾನದ ಆಧುನಿಕತೆಯ

ಜ್ಞಾನಯುಗ ಪ್ರಾರಂಭವಾಗಿದೆ. ಆದಾಗ್ಯೂ ಶ್ರೀ.ಪಿತ್ರೋಡ ಸನಾತನ ಸಂಸ್ಕೃತಿಯ ಪ್ರತಿನಿಧಿಯಂತಿದ್ದ ಗಾಂಧಿಯನ್ನು ನೆನೆಯುಲೇ ಇಲ್ಲ. ಗಾಂಧಿಯನ್ನು ಸಂಸ್ಥೀಕರಣಗೊಳಿಸುವ ಅಗತ್ಯವಿಲ್ಲ ಆದರೆ ಅವರನ್ನು ಆತ್ಮಸತ್ ಮಾಡಿಕೊಳ್ಳುವ ಅಗತ್ಯವಿದೆಯೆಂದು ಹೇಳಿದ್ದಾರೆ. ಗಾಂಧಿ ಜ್ಞಾನ ಆಯೋಗದ ಕಾರ್ಯವಿಧಾನದ ಹೃದಯ ಮತ್ತು ಮಾನಸದಲ್ಲಿ ಇರಬೇಕಾಗುತ್ತದೆ ಎಂದು ಹೇಳಿದ್ದಾರೆ. ಆದರೆ ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಗಾಂಧಿಯ ವಿಚಾರದ ಸುಳಿವೇ ಇಲ್ಲ ಎಂಬುದು ವಿಷಾದನೀಯ.

ಪ್ರೊ.ಸಿ.ಎನ್.ಆರ್.ರಾವ್ ಅವರು ತಮ್ಮ **"ಭಾರತ ಹೊಂದಿರಬೇಕಾದ ದೂರದೃಷ್ಟಿ"** ಎಂಬ ಇಡೀ ಉಪನ್ಯಾಸದಲ್ಲಿ ಭಾರತವನ್ನು ವೈಜ್ಞಾನಿಕ ಕ್ಷೇತ್ರದಲ್ಲಿ ಭಾರತ ಹೇಗೆ ಜಾಗತಿಕ ನಾಯಕ ದೇಶವಾಗಬಹುದೆಂಬುದರ ಬಗ್ಗೆಯೇ ಪ್ರಸ್ತಾಪಿಸಿದ್ದಾರೆ. ಭಾರತ ಜಾಗತಿಕ ನಾಯಕವಾಗಬೇಕಾದರೆ ಏನೆಲ್ಲಾ ಸಿದ್ಧತೆಗಳಾಗಬೇಕೆಂಬುದನ್ನು ವಿವರಣಾತ್ಮಕವಾಗಿ ಹೇಳಿದ್ದಾರೆ. ಅಮೇರಿಕಾ ಮತ್ತು ಚೀನಾ ದೇಶಗಳನ್ನು ಹಿಂದಕ್ಕೆ ಹಾಕಿ ಭಾರತ ವಿಜ್ಞಾನ ಕ್ಷೇತ್ರದಲ್ಲಿ ನಂಬರ್ ೧ ದೇಶವಾಗಬೇಕೆಂದು ಬಯಸಿದ್ದಾರೆ. ಅವರು ತಮ್ಮ ಭಾಷಣದಲ್ಲಿ ಎಲ್ಲಿಯೂ ಕೃಷಿ ಮತ್ತು ಗ್ರಾಮಗಳ ವಿಷಯವಾಗಿ ಪ್ರಸ್ತಾಪಿಸಿಲ್ಲ. ಅತ್ಯಾಧುನಿಕ ವೈಜ್ಞಾನಿಕ ಭಾರತದಲ್ಲಿ ಅವುಗಳಿಗೆ ಅಸ್ತಿತ್ವವೇ ಇರುವುದಿಲ್ಲವೇನೋ ಎಂಬ ಸಂಶಯ ಮೂಡುತ್ತದೆ. ಕೃಷಿ ಮತ್ತು ಗ್ರಾಮ ಜೀವನದ ಏಳಿಗೆಯನ್ನೂ ಬಯಸುತ್ತಾ ವೈಜ್ಞಾನಿಕ ಭಾರತದ ಬಗ್ಗೆ ಸಲಹೆ ಮಾಡಿದ್ದರೆ ಅವರ ಉಪನ್ಯಾಸ ಹೆಚ್ಚು ವಾಸ್ತವವಾಗುತ್ತಿತ್ತು ಎಂದೆನಿಸುತ್ತದೆ.

ಸದ್ಗುರು ಜಗ್ಗೀ ವಾಸುದೇವಜೀ ತಮ್ಮ **"ತಂತ್ರಜ್ಞಾನಗಳು ಮತ್ತು ಕ್ಷೇಮಜೀವನ"** ಕುರಿತು ಮಾಡಿದ ಉಪನ್ಯಾಸದಲ್ಲಿ ಮನುಷ್ಯನ ಅಪರಿಮಿತ ಲೌಕಿಕ ಆಸೆಗಳ ನಿರರ್ಥಕತೆಯನ್ನು ಹಲವಾರು ಉದಾಹರಣೆಗಳ ಮೂಲಕ ತೋರಿಸಿದ್ದಾರೆ. ಅನೇಕ ಸುಂದರವಾದ ಉದಾಹರಣೆಗಳನ್ನು ಕೊಟ್ಟಿದ್ದಾರೆ. ಇಷ್ಟೆಲ್ಲಾ ತಂತ್ರಜ್ಞಾನ ಬೆಳೆದಿದ್ದರೂ ಕೂಡ ಆತ್ಮಿಕ ಕ್ಷೇಮಜೀವನದ ತಂತ್ರಜ್ಞಾನ ನಮ್ಮ ಜೀವನದ ಭಾಗವಾಗಬೇಕೆಂದು ಹೇಳಿದ್ದಾರೆ. ಭಾರತ ದೊಡ್ಡ ಆರ್ಥಿಕ ಸುಧಾರಣೆಯ ಹೊಸ್ತಿಲಲ್ಲಿದೆ ಆದರೆ ಕೇವಲ ಆರ್ಥಿಕ ಕ್ಷೇಮ ಮಾನವ ಕ್ಷೇಮವನ್ನು ಸಾಧಿಸುತ್ತದೆಂದು ಹೇಳಲಾಗುವುದಿಲ್ಲ ಆದ್ದರಿಂದ ಆಧ್ಯಾತ್ಮಿಕ ಆಯಾಮವನ್ನು ಮಾನವ ಜೀವನದಲ್ಲಿ ತರಬೇಕಾದುದು ಅಗತ್ಯವೆಂದು ಹೇಳಿರುವುದು ಸೂಕ್ತವಾಗಿದೆ. ಸದ್ಗುರು ಜಗ್ಗೀ ವಾಸುದೇವ್‌ಜಿಯವರ ಉಪನ್ಯಾಸ ಪೂರ್ಣವಾಗಿ ಆಧ್ಯಾತ್ಮಿಕ ವಿಚಾರಗಳನ್ನೊಳಗೊಂಡಿದೆ. ಜ್ಞಾನಯೋಗ, ಕರ್ಮಯೋಗ, ಭಕ್ತಿಯೋಗ ಮತ್ತು ಕ್ರಿಯಾಯೋಗಗಳ ಸಮನ್ವಯತೆಯನ್ನು ಸಾಧಿಸಬೇಕಾದ ಅಗತ್ಯತೆಯ ಬಗ್ಗೆ ಅವರು ಚೆನ್ನಾಗಿ ಹೇಳಿದ್ದಾರೆ. ಯಾವ ರೀತಿ ವಾಹನದ ನಾಲ್ಕೂ ಚಕ್ರಗಳು ಒಂದೇ ದಿಕ್ಕಿನತ್ತ ಚಲಿಸುವಂತೆ ಅವುಗಳ ಸಂಯೋಜನೆ ಮಾಡಬೇಕಾಗುತ್ತದೊ ಅದೇ ರೀತಿ ಈ ನಾಲ್ಕೂ ಯೋಗಗಳನ್ನು ನಮ್ಮ ಜೀವನದ ರಥ ಸುಗಮವಾಗಿ ಚಲಿಸಬೇಕಾದರೆ ಅವುಗಳ ಸರಿಯಾದ ಸಂಯೋಜನೆ ಮತ್ತು ಸಮನ್ವಯ ಅಗತ್ಯವೆಂದು ಅವರು ಹೇಳಿದ್ದಾರೆ. ಅವರು ಹೇಳಿದ ಆತ್ಮದ ವ್ಯಾಪಕತೆ ಮತ್ತು ಅದರ ನಿರಂತತೆಯ ಮಾತುಗಳನ್ನು ಓದುವಾಗ ನಮ್ಮ ಉಪನಿಷತ್ತುಗಳ ಮಹತ್ವ ಮತ್ತು ಅವು ಇಂದಿಗೂ ಹೇಗೆ ಪ್ರಸ್ತುತವಾಗಿವೆ

ಎಂದೆನಿಸಿತು. ಅವರು ೧೫ ಸಾವಿರ ವರ್ಷಗಳಷ್ಟು ಹಳೆಯದಾದ ಭಾರತೀಯ ಜ್ಞಾನ ಪರಂಪರೆಯನ್ನು ಜ್ಞಾಪಿಸಿದ್ದಾರೆ ಮತ್ತು ಜಗತ್ತಿನಲ್ಲಿಯೇ ಅದ್ವಿತೀಯವಾದುದೆಂದು ಹೇಳಿದ್ದಾರೆ. ಅದರ ಉಪಯೋಗವು ಇಂದಿನ ಆಧುನಿಕ ಜೀವನದಲ್ಲಿ ಆಗಬೇಕೆಂದು ಹೇಳಿದ್ದಾರೆ. ಈ ಕುರಿತು ಭಾರತೀಯ ವಿಜ್ಞಾನಿಗಳು, ತಂತ್ರಜ್ಞಾನಿಗಳು ಮತ್ತು ಶಿಕ್ಷಣ ತಜ್ಞರು ಗಂಭೀರವಾಗಿ ಆಲೋಚಿಸುವುದು ಅಗತ್ಯವಾಗಿದೆ.

ಡಾ. ಅಬ್ದುಲ್ ಕಲಾಂ ತಮ್ಮ **"ವಾಸಯೋಗ್ಯ ಭೂಮಿ"** ಎಂಬ ಉಪನ್ಯಾಸದಲ್ಲಿ ಜೀವಿಸಲು ಯೋಗ್ಯವಾಗಿರುವ ಒಂದೇ ಭೂಮಿಯ ಹಿತದ ಕಾಳಜಿಯನ್ನು ಮನೋಜ್ಞವಾಗುವಂತೆ ವ್ಯಕ್ತಪಡಿಸಿದ್ದಾರೆ. ನಮ್ಮ ಹೃದಯದಲ್ಲಿ ಸದಾಚಾರತೆಯ ಭಾವನೆ ಇದ್ದಲ್ಲಿ ನಾವು ಸ್ವಚ್ಛ ಸಸ್ಯಶ್ಯಾಲಮ ವಾತಾವರಣದಲ್ಲಿ ಇರಬಹುದು ಮತ್ತು ದಾರಿದ್ರ್ಯರಹಿತ ಜೀವನ ಉನ್ನತಿ ಹೊಂದಬಹುದು ಮತ್ತು ಯುದ್ಧ ಭೀತಿಯಿಲ್ಲದೆ ಶಾಂತಿ ಹೊಂದಬಹುದು ಮತ್ತು ದೇಶದ ಎಲ್ಲ ನಾಗರೀಕರು ಸಂತೋಷವಾಗಿ ಇರುವಂಥ ಸ್ಥಳವನ್ನಾಗಿ ಮಾಡಬಹುದು. ತನ್ಮೂಲಕ ಈ ಭೂ ಗ್ರಹದಲ್ಲಿ ಉದಾತ್ತವಾದ ಸಮಾಜದ ಉಗಮಕ್ಕೆ ಒಂದು ಮಾದರಿ ದೇಶವಾಬಹುದೆಂದು ಡಾ. ಕಲಾಂ ರವರು ಹಾರೈಸಿರುವುದನ್ನು ಎಲ್ಲರೂ ಸ್ವಾಗತಿಸಬೇಕು ಮತ್ತು ಅಂಥ ಭೂಗ್ರಹ ನಮ್ಮದಾಗುವಂತೆ ನಾವೆಲ್ಲರೂ ಪ್ರಯತ್ನಿಸಬೇಕು. ಅವರು ಸುಸ್ಥಿರ ಅಭಿವೃದ್ಧಿಯ ವಿಧಾನದ ಬಗ್ಗೆ ಹೇಳಿದ್ದಾರೆ. ಅದು "ಪುರ ಎಂಬ ಯೋಜನೆ". ಅಂದರೆ ಗ್ರಾಮಾಂತರ ಪ್ರದೇಶದಲ್ಲಿ ಪಟ್ಟಣದ ಸೌಕರ್ಯಗಳನ್ನು ಒದಗಿಸುವ ಯೋಜನೆ. ಒಂದು ಭೌಗೋಳಿಕ ಪ್ರದೇಶದ ಗ್ರಾಮ ಸಮುದಾಯಗಳನ್ನು ಒಟ್ಟಿಗೆ ತಂದು ಎಲ್ಲ ವಿಧವಾದ ವೈಜ್ಞಾನಿಕ ಮತ್ತು ತಾಂತ್ರಿಕ ಜ್ಞಾನದ ಹೊಂದಾಣಿಕೆಮಾಡಿ ಆ ಗ್ರಾಮಗಳಲ್ಲಿ ಆರ್ಥಿಕ ಕ್ರಿಯೆಗಳು ಉಂಟಾಗುವಂತೆ ಮಾಡುವುದು. ಇದೊಂದು ಸಂಪೂರ್ಣ ವಿಕೇಂದ್ರಿಕೃತ ವ್ಯವಸ್ಥೆಯಲ್ಲಿ ನಡೆಯುವ ಅಭಿವೃದ್ಧಿ ಯೋಜನೆ. ದೇಶದಲ್ಲಿರುವ ಆರು ಲಕ್ಷ ಹಳ್ಳಿಗಳಲ್ಲಿ ಏಳು ಸಾವಿರ ಪುರ ಯೋಜನೆಗಳಿರುವುವು. ಪುರ ಯೋಜನೆಯಿಂದ ಗ್ರಾಮೀಣ ಜನರಲ್ಲಿರುವ ಪರಂಪರಾಗತ ಜ್ಞಾನ, ಅನುಭವ, ಕೌಶಲ್ಯ ಮುಂತಾದವುಗಳೆಲ್ಲದರ ಉಪಯೋಗವಾಗುವುದರೊಂದಿಗೆ ಜನರಲ್ಲಿ ಆತ್ಮವಿಶ್ವಾಸವು ಮೂಡುವುದು. ಸಂಸದರು ತಮ್ಮ ತಮ್ಮ ಕ್ಷೇತ್ರದಲ್ಲಿ ತಮ್ಮ ಕ್ಷೇತ್ರಾಭಿವೃದ್ಧಿ ಯೋಜನೆಯ ಹಣದಲ್ಲಿ ಒಂದು ಹಳ್ಳಿಯನ್ನು ದತ್ತು ತೆಗೆದುಕೊಂಡು ಅದನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಬೇಕೆಂಬ ಪ್ರಧಾನಮಂತ್ರಿ ಮೋದಿಯವರ ಇತ್ತೀಚೆಗಿನ ಯೋಜನೆಯಲ್ಲಿ ಪುರ ಯೋಜನೆಯನ್ನು ಅಳವಡಿಸಿಕೊಂಡಲ್ಲಿ ಅನುಕೂಲವಾಗುವುದು.

ಚಂದ್ರಲೋಕಕ್ಕೆ ಪ್ರಯಾಣ ಮಾಡುತ್ತಿದ್ದ ರಾಕೇಶ್ ಶರ್ಮನಿಗೆ ಇಂದಿರಾಗಾಂಧಿ "ಆಕಾಶದಿಂದ ಭಾರತ ಹೇಗೆ ಕಾಣಿಸುತ್ತದೆಂದು" ಕೇಳಿದಾಗ ರಾಕೇಶ್ ಕೊಟ್ಟ ಉತ್ತರ "ಸಾರೇ ಜಹಾಂಸೆ ಅಚ್ಛಾ ಹಿಂದೂಸ್ತಾನ್ ಹಮಾರ" ಎಂದು ಉತ್ತರಿಸಿದರು. ಈ ಉತ್ತರ ಕೇಳಿ ಇಂದಿರಾಗಾಂಧಿ ನಸುನಕ್ಕರು. ಉಪನಿಷತ್ತುಗಳು ನಿಷ್ಠಾ ಭಾವನೆಯಿಂದ ತತ್ವಮಸಿ ಎಂದರೆ ನೀನು ಬ್ರಹ್ಮ ಇದೇ ನಮ್ಮ ಬಲ ಈ ಕಾರಣದಿಂದಾಗಿ ನಮ್ಮ ಭಾರತದ ಬಗ್ಗೆ ನಮಗೆ ಗೌರವವಿದೆ. ಭಾರತ ಜಗತ್ತಿನಲ್ಲೆಲ್ಲಾ ಒಳ್ಳೆಯದಾಗಿದೆ ಎಂಬುದಕ್ಕೆ

ಕಾರಣ ಇಲ್ಲಿ ಬ್ರಹ್ಮವಿದ್ಯೆ ಇದೆ ಎಂಬುದಾಗಿ ವಿನೋಬಾ ಹೇಳಿದ್ದಾರೆ. ಆದ್ದರಿಂದ ನಮ್ಮ ವಿಜ್ಞಾನಿಗಳು, ತಂತ್ರಜ್ಞಾನಿಗಳು, ಇಂಜಿನಿಯರುಗಳು ದೇಶದ ಪುರಾತನ ಗ್ರಂಥಗಳಾದ ಉಪನಿಷತ್ತುಗಳಲ್ಲಿ ಹೇಳಿರುವ ಮಾತುಗಳತ್ತ ಗಮನ ಹರಿಸಬೇಕಾದುದು ಇಂದಿನ ಆಧುನಿಕ ಕಾಲದಲ್ಲಿ ಅಗತ್ಯ. ಈಗ್ಗೆ ಸುಮಾರು ಮುನ್ನೂರು - ನಾನ್ನೂರು ವರ್ಷಗಳ ಹಿಂದೆ ಇಂಗ್ಲೀಷ್ ಭಾಷೆಯ ಮೂಲಕ ಜರ್ಮನ್ ಭಾಷೆಯಲ್ಲಿ ಉಪನಿಷತ್ತುಗಳು ಅನುವಾದಗೊಂಡಾಗ ಅಲ್ಲಿಯ ವಿಚಾರವಂತರು ಮುಖ್ಯವಾಗಿ ಶೋಪಾನ್ ಹವರ್ ಮೇಲೆ ಅವುಗಳದು ಬಹಳ ಪ್ರಭಾವ ಉಂಟಾಯಿತು. ಜಗತ್ತಿನ ಸರ್ವಶ್ರೇಷ್ಠ ದಾರ್ಶನಿಕ ಶೋಪನ್ ಹಾವರ್ ಅವುಗಳನ್ನು ಓದಿ ಕುಣಿಯಲಾರಂಭಿಸಿದ. ಇವು ಸಾಯುವವರೆಗೂ ಕೆಲಸಕ್ಕೆ ಬರುವವು ಎಂದು ಹೇಳಿದ. ನಂತರ ಅವುಗಳ ಬಗ್ಗೆ ಬಹಳಷ್ಟು ಬರೆದ. ಅಮೇರಿಕೆಯಲ್ಲೂ ಕೂಡ ಉಪನಿಷತ್ತುಗಳು ಪರಾಕ್ರಮ ಮಾಡಿದವು. ಎಮರ್ಸನ್ ಮತ್ತು ಥೊರೋರಂಥ ದಾರ್ಶನಿಕರು ಹಾಗು ಟಾಯಿಮ್‌ರಂಥ ಕವಿಗಳ ಮೇಲೂ ಸಹ ಅವುಗಳ ಬಹಳ ಪ್ರಭಾವವಿತ್ತು. ಅವರು ಸ್ವಾಮಿ ವಿವೇಕಾನಂದರ ಅಮೇರಿಕಾದ ಭೇಟಿಗೆ ಭೂಮಿಕೆ ತಯಾರು ಮಾಡಿದ್ದರು. ಸ್ವಾಮಿ ವಿವೇಕಾನಂದರು ತಮ್ಮ ಒಂದು ವ್ಯಾಖ್ಯಾನದಿಂದ ಅಮೇರಿಕೆಯನ್ನು ಗೆದ್ದರು. ಇಂಥ ಶ್ರೇಷ್ಠ ವಿದ್ಯೆಯನ್ನು ಸಾರುವ ಉಪನಿಷತ್ತುಗಳ ಬಗ್ಗೆ ನಮ್ಮ ದೇಶದ ವಿಜ್ಞಾನಿಗಳು, ತಂತ್ರಜ್ಞಾನಿಗಳು, ಕೈಗಾರಿಕೋದ್ಯಮಿಗಳು ಉದಾಸೀನವಾಗಿರುವುದು ಮತ್ತು ಅವುಗಳ ಉಪಯೋಗವನ್ನು ಸರಿಯಾಗಿ ಮಾಡಿಕೊಳ್ಳದೇ ಇರುವುದು ವಿಷಾದನೀಯ ಸಂಗತಿ. ಅವರ ಈ ಉದಾಸೀನತೆಗೆ ಪಾಶ್ಚಿಮಾತ್ಯ ವಿಜ್ಞಾನ, ತಂತ್ರಜ್ಞಾನ, ಶಿಕ್ಷಣದ ಪ್ರಭಾವ ಒಂದು ಕಾರಣವಾದರೆ, ಪಶ್ಚಿಮ ದೇಶಗಳಿಂದ ಬರುವ ಜ್ಞಾನವೆಲ್ಲವೂ ಬಹು ಶ್ರೇಷ್ಠ, ದೇಶದ ಮಣ್ಣಿನಲ್ಲಿರುವ, ಗಾಳಿಯಲ್ಲಿರುವ ಜ್ಞಾನ ಕನಿಷ್ಠ ಎಂಬ ಮನೋಭಾವನೆಯನ್ನು ಹೊಂದಿರುವುದು ಇನ್ನೊಂದು ಕಾರಣ. ಭಾರತ ಮುಂದುವರಿದ ದೇಶವೆಂದೆನಿಸಿಕೊಳ್ಳಬೇಕಾದರೆ ಚೀನಾವನ್ನು ಹಿಂದಕ್ಕೆ ಹಾಕಬೇಕು, ಅಮೇರಿಕಾವನ್ನು ಹಿಂದಕ್ಕೆ ಹಾಕಬೇಕು ಎಂಬ ವಿಚಾರವು ಇದಕ್ಕೆ ಕಾರಣವಾಗಿದೆ. ಭಾರತದ ಜ್ಞಾನ ಪರಂಪರೆಯ ಬಗ್ಗೆ ಉದಾಸೀನತೆ ದೇಶದ ಪ್ರತಿಷ್ಠಿತ ವ್ಯಕ್ತಿಗಳ ಉಪನ್ಯಾಸಗಳಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಭಾರತ ಗ್ರಾಮಗಳ ದೇಶ; ಕೃಷಿ ದೇಶದ ಬೆನ್ನೆಲುಬು ಎಂಬ ಮಾತು ಮರೆತುಹೋಗಿರುವಂತೆ ಭಾಸವಾಗುತ್ತದೆ. ಇವುಗಳ ಪ್ರಸ್ತಾಪ, ಇವುಗಳ ಉನ್ನತಿಯ ಮಾತು ಎಲ್ಲಿಯೂ ದೃಢತೆಯಿಂದ ಕೇಳಿ ಬರುವುದಿಲ್ಲ. ದೇಶದೊಳಗಿರುವ ವಿವಿಧ ಜಾತಿ, ಧರ್ಮ, ಭಾಷೆ, ಸಂಸ್ಕೃತಿ, ಸನ್ನಿವೇಶ ಮುಂತಾದ ವಿವಿಧತೆಯಿಂದ ಕೂಡಿದ ನೂರಿಪ್ಪತ್ತೈದು ಕೋಟಿ ಜನಸಂಖ್ಯೆಯಿರುವ ಸಮುದಾಯದ ಸಮಾಜವ್ಯವಸ್ಥೆ ಯವ ರೀತಿ ಇರಬೇಕೆಂಬ ಬಗ್ಗೆ ಚಿಂತನೆ ಈ ಉಪನ್ಯಾಸಗಳಲ್ಲಿ ಕಂಡು ಬರುವುದಿಲ್ಲ. ಸಂವಿಧಾನ ರಾಜಕೀಯವಾಗಿ ಸೂಚಿಸಿರುವ ಸಮಾಜವ್ಯವಸ್ಥೆಯೇ ದೇಶದ ಸಮಾಜವ್ಯವಸ್ಥೆ ಎಂದು ತೀರ್ಮಾನಿಸುವುದರಲ್ಲಿ ಅಪಾಯವಿದೆ. ಆ ಸಂವಿದಾನ ಪ್ರತಿಪಾದಿಸಿರುವ ಸಮಾಜವ್ಯವಸ್ಥೆಯ ಹಿಂದೆ ರಾಜಕೀಯ ಪ್ರೇರಣೆಗಳಿವೆ. ಆರ್ಥಿಕ ಅಸಮಾನತೆ, ಶೋಷಕ - ಶೋಷಿತ, ರಾಜಕೀಯ ಮೇಲಾಟ ಮುಂತಾದವುಗಳು ಇಂದಿನ ಸಮಾಜ ವ್ಯವಸ್ಥೆಯಲ್ಲಿ ಹಾಸು ಹೊಕ್ಕಾಗಿವೆ. ಇವುಗಳನ್ನ ಮೀರಿದಂಥ ಸಮಾಜವ್ಯವಸ್ಥೆಯೊಂದನ್ನು ರೂಪಿಸಬಹುದಾದ ಸಾಧ್ಯತೆಯ ವಿಚಾರಗಳು

ಉಪನ್ಯಾಸಗಳಲ್ಲಿ ಕಂಡು ಬಂದಿಲ್ಲ. ಭಾರತೀಯ ಭಾಷೆಗಳನ್ನು ಬಲಪಡಿಸುವ ಅವುಗಳ ಮೂಲಕ ವೈಜ್ಞಾನಿಕ ಮತ್ತು ತಾಂತ್ರಿಕ ಸಾಧನೆಗಳನ್ನು ಮಾಡುವ ಸಾಧ್ಯತೆ, ಬಗೆ ಮುಂತಾದವುಗಳ ಬಗ್ಗೆ ಕೂಡ ಚಿಂತನೆ ನಡೆಯದಿರುವುದು ಒಂದು ಕೊರತೆ ಎನಿಸುತ್ತದೆ. ಇಂಗ್ಲೀಷ್ ಭಾಷೆಯ ಸಾರ್ವಭೌಮತ್ವವನ್ನೇ ಒಪ್ಪಿಕೊಂಡಿರುವಂತೆ ಭಾಸವಾಗುತ್ತದೆ. ಇಂಗ್ಲೀಷ್ ಭಾಷೆ ಕಲಿಸಲು ನಾವು ವ್ಯಯಿಸುತ್ತಿರುವ ಸಮಯ, ಹಣ ಮತ್ತು ಶ್ರಮ ಎಷ್ಟು ದುಬಾರಿ ಎಂಬುದನ್ನು ಕುವೆಂಪುರವರು ಹೇಳಿದ ಈ ಮಾತುಗಳ ಮೂಲಕ ತಿಳಿಯಬಹುದು. ಅವರು ಹೇಳಿದ್ದೇನೆಂದರೆ "ನಮ್ಮ ದೇಶದಲ್ಲಿ ನಡೆಯುತ್ತಿರುವ ಎಲ್ಲ ಕಾರ್ಖಾನೆ, ಅಣೆಕಟ್ಟುಗಳ ಕೆಲಸ ಕಾರ್ಯಗಳನ್ನೂ ನಿಲ್ಲಿಸಿ, ಅದರಿಂದ ಉಳಿತಾಯವಾಗುವ ಎಲ್ಲ ಸಂಪತ್ತನ್ನೂ ಇಂಗ್ಲೀಷ್ ವಿದ್ಯಾಭ್ಯಾಸದ ಮಟ್ಟವನ್ನು ಏರಿಸಲು ವಿನಿಯೋಗಿಸಿದರೂ ಇನ್ನೂ ಕೋಟ್ಯಾಂತರ ರೂಪಾಯಿಗಳನ್ನು ಸುರಿದರೂ ನೂರು ವರ್ಷಗಳ ಕಾಲ ಸತತವಾಗಿ ದುಡಿದರೂ ಇಂಗ್ಲೀಷ್ ಭಾಷಾ ಜ್ಞಾನ ನಮ್ಮ ವಿದ್ಯಾರ್ಥಿಗಳಲ್ಲಿ ಈಗಿರುವುದಕ್ಕಿಂತಲೂ ಹೆಚ್ಚೇನೂ ಉತ್ತಮವಾಗುವುದಿಲ್ಲವೆಂದು ಖಚಿತವಾಗಿ ಹೇಳುತ್ತೇನೆ. ಒಂದು ವೇಳೆ ನಾಲ್ವರು ವಿದ್ಯಾರ್ಥಿಗಳಿಗೆ ಒಬ್ಬ ಇಂಗ್ಲೀಷ್ ಅಧ್ಯಾಪಕನನ್ನು ನೇಮಿಸಿ ಇಂಗ್ಲೀಷನ್ನು ದಿನಕ್ಕೆ ನಾಲ್ಕು ಘಂಟೆಗಳ ಕಾಲ ಪಾಠ ಹೇಳಿಸಿದರೆ ಉಳಿದ ಪಾಠಗಳ ಗತಿಯೇನು? ಈ ಭ್ರಾಂತಿ ಬಿಟ್ಟು ದೇಶದ ಅಪಾರ ನಷ್ಟವನ್ನು ತಡೆಗಟ್ಟಲು ಇಂಗ್ಲೀಷಿನ ಹೊರೆಯನ್ನು ಕಡಿಮೆ ಮಾಡಿ ವಿದ್ಯಾರ್ಥಿಗಳ ನವೋದಯಕ್ಕೆ ಪ್ರೇರಕವಾಗುವ ನಿರ್ಣಯಗಳನ್ನು ಮಾಡಬೇಕು." ಈ ಮಾತನ್ನು ಹೇಳುವಾಗ ಕೆಲ ದಿನಗಳ ಹಿಂದೆಯಷ್ಟೇ ಆಂಧ್ರದ ನೆಲಗೊಂಡದಲ್ಲಿ ಒಂದನೇ ತರಗತಿ ವಿದ್ಯಾರ್ಥಿ ಇಂಗ್ಲೀಷ್‌ನಲ್ಲಿ ಮಾತನಾಡದೆ ತೆಲುಗಿನಲ್ಲಿ ಮಾತನಾಡಿದ್ದಕ್ಕಾಗಿ ಶಿಕ್ಷಕಿ ಮಗುವಿನ ತಲೆಯನ್ನು ಗೋಡೆಗೆ ಅಪ್ಪಳಿಸಿದ, ಮಗು ಸತ್ತುಹೋದ ಸುದ್ದಿಯನ್ನು ಓದಿದ್ದು ಜ್ಞಾಪಕಕ್ಕೆ ಬರುತ್ತದೆ. ಇಂಗ್ಲೀಷನ್ನು ಅತಿಯಗಿ ವೈಭವೀಕರಿಸುತ್ತಿರುವ ದೇಶದ ರಾಜಕಾರಣಿಗಳು ಮತ್ತು ವಿಚಾರವಂತರು ಈ ಘಟನೆಯಿಂದ ಎಚ್ಚೆತ್ತುಕೊಳ್ಳಬೇಕಾದುದು ಅಗತ್ಯ.

ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ರೈತರ ಆತ್ಮಹತ್ಯೆಗೆ ಕಾರಣವಾಗುವ ಹವಾಮಾನದ ಏರುಪೇರು, ಆರ್ಥಿಕ ಸಂಕೀರ್ಣತೆ, ವ್ಯವಸಾಯದಲ್ಲಿಯ ತಾಂತ್ರಿಕತೆಯಲ್ಲಿರುವ ವಿವಿಧ ಸಮಸ್ಯೆಗಳ ಬಗ್ಗೆ ವೈಜ್ಞಾನಿಕ ಪರಿಹಾರಗಳನ್ನು ಸೂಚಿಸುವ ಚಿಂತನೆ ನಡೆದಿಲ್ಲ. ಬೆಳೆಯುತ್ತಿರುವ ವಿಜ್ಞಾನಕ್ಕೆ, ತಂತ್ರಜ್ಞಾನಕ್ಕೆ ಅವು ಯಾವುದೇ ಕ್ಷೇತ್ರಕ್ಕೆ ಸಂಬಂಧಿಸಿದ್ದಾಗಿರಲಿ ಅವುಗಳೊಂದಿಗೆ ಅತ್ಮಜ್ಞಾನದ ವಿಚಾರವನ್ನೂ ಕೂಡ ಸೇರಿಸುವುದು ಅಗತ್ಯ. ಆತ್ಮಜ್ಞಾನವಿಲ್ಲದ ವಿಜ್ಞಾನ, ವಿಜ್ಞಾನವಿಲ್ಲದ ಆತ್ಮಜ್ಞಾನ ಎರಡೂ ಗಂಡಾಂತರಕಾರಿ. ಬ್ರಹ್ಮವಿದ್ಯೆಯ ಮೂಲ ಸ್ಥಾನವಾದ ಭಾರತದ ವಿಜ್ಞಾನಿಗಳು, ತಂತ್ರಜ್ಞಾನಿಗಳು, ಇಂಜಿನಿಯರುಗಳು ಮತ್ತು ಕೈಗಾರಿಕೋದ್ಯಮಿಗಳು ಈ ನಿಟ್ಟಿನಲ್ಲಿ ಯೋಚಿಸುತ್ತಾ ಕಾರ್ಯವೆಸಗಿದರೆ ಉತ್ತಮ. ಈಶಾವಾಸ್ಯ ಉಪನಿಷತ್ತಿನಲ್ಲಿ ಬರುವ,

ಹಿರಣ್ಮಯೇನಾ ಪಾತ್ರೇಣ ಸತ್ಯಸ್ಯಾಪಹಿತಂ ಮುಖಂ,
ತತ್‌ತ್ವಂ ಪೂಷನ್ ಅಪಾವೃಣು ಸತ್ಯಧರ್ಮಾಯ ದೃಷ್ಟಯೇ
ಎಂಬೀ ಮಾತನ್ನು ನಾವೆಲ್ಲರೂ ನೆನಪಿನಲ್ಲಿಟ್ಟುಕೊಳ್ಳೋಣ.

ಜೈ ಜಗತ್

ಆಧುನಿಕತೆ : ಮಿಂಚಿದ ವಿಚಾರಗಳು

(ಕುಪ್ಪಳ್ಳಿಯಲ್ಲಿ 'ಆಧುನಿಕತೆಯೊಂದಿಗೆ ಮುಖಾಮುಖಿ' ಎಂಬ ಅಧ್ಯಯನ ಶಿಬಿರ ಕಳೆದ ಅಕ್ಟೋಬರ್ ೧೯ ಮತ್ತು ೨೦ರಂದು ನಡೆಯಿತು. ಆ ಶಿಬಿರದಲ್ಲಿ ಆಧುನಿಕತೆ ಕುರಿತು ಮಿಂಚಿದ ವಿಚಾರಗಳ ಸಂಗ್ರಹ ಇಲ್ಲಿದೆ – ಸಂ)

ನಮ್ಮ ಪರಂಪರೆಯ ಬಗ್ಗೆ ಸಾರಾ ಸಗಟಾದ ಅಪನಂಬಿಕೆ, ಅಪಮೌಲ್ಯ ಸೃಷ್ಟಿಸಿ ಆತ್ಮಕ್ಕೆ ಅಸ್ತಿತ್ವವೇ ಇಲ್ಲದ ದೇಹವೇ ಪ್ರಧಾನವಾದ ಜೀವನ ದೃಷ್ಟಿ ಮತ್ತು ಜೀವನ ಕ್ರಮಗಳ ಮೂಲಕ ನಮ್ಮನ್ನು ನಾವು ಕಳೆದುಕೊಳ್ಳುವಂತಹ ಮೈ ಮರೆಯುವಿಕೆಯ ಭೂಮಿಕೆಯನ್ನು ಆಧುನಿಕತೆ ನಿರ್ಮಾಣ ಮಾಡಿದೆ. ಬೀದಿಯಲ್ಲಿ ಕಸ ಸೃಷ್ಟಿಯಾಗಿರುವುದು ಆಧುನಿಕ ನಾಗರೀಕತೆ ನಮ್ಮ ಮನದಲ್ಲಿ ಸೃಷ್ಟಿಸಿರುವ ಕಸದಿಂದಾಗಿಯೇ ಎಂಬ ಸತ್ಯದ ಬಗ್ಗೆ ನಮ್ಮಲ್ಲಿ ವಿಸ್ಮೃತಿ ಮೂಡಿದೆ. ಸ್ವಾತಂತ್ರ್ಯ, ಸಮಾನತೆ, ಸಹೋದರತೆ ಎಂಬುವು ಆಧುನಿಕತೆ ಕೊಟ್ಟ ಮೌಲ್ಯಗಳು ಎಂಬುದು ಸಂಪೂರ್ಣ ನಿಜವಾಗಿದ್ದರೆ ಆಧುನಿಕವೆನ್ನಲಾಗುವ ಇಂದಿನ ಸಮಾಜದಲ್ಲಿ ಇಷ್ಟೊಂದು ಅಗಾಧವಾದ ಅಸಮಾನತೆ ಮತ್ತು ಹಿಂಸೆ ಹೇಗೆ ಸಾಧ್ಯ?

– ಶ್ರೀ.ಡಿ.ಎಸ್.ನಾಗಭೂಷಣ್

****

ಕೈಗಾರಿಕಾ ಕ್ರಾಂತಿಯ ನಂತರ ಆಧುನಿಕತೆ ಒಂದು ವ್ಯಸನವಾಗಿ ಮಾರ್ಪಟ್ಟು ಈಗ ಅದು ವಾಸಿಯಾಗದ ಖಾಯಿಲೆಯಾಗಿದೆ. ಅಲ್ಲದೆ ಸಧ್ಯದ ಸ್ಥಿತಿಯಲ್ಲಿ ಅದು 'ಆಧುನಿಕಶಾಹಿ' ರೂಪ ಪಡೆದು 'ಗೂಂಡಾಗಿರಿ' ಯ ಸ್ವರೂಪದಲ್ಲೂ ವ್ಯಕ್ತವಾಗುತ್ತಿದೆ. ಆಧುನಿಕ ನಾಗರೀಕತೆಯ ಷಡ್ಯಂತ್ರವನ್ನು ಸಮರ್ಥವಾಗಿ ಪ್ರತಿರೋಧಿಸಿದ್ದು ಗಾಂಧಿ ಒಬ್ಬರೆ. ಈ ವಿಷಯದಲ್ಲಿ ಲೋಹಿಯಾ, ಅಂಬೇಡ್ಕರ್ ಕೂಡ ಈ ಸಂಬಂಧ ಗಾಂಧಿಗೆ ವಿರುದ್ಧವಾಗಿ ಮುಖಾಮುಖಿಯಾದದ್ದು ಅತ್ಯಂತ ವಿಷಾದದ ಸಂಗತಿ. ಆಧುನಿಕತೆಯ ೧೦% ರಷ್ಟು ಲಾಭ ಮಾತ್ರ ದಲಿತರಿಗೆ ದೊರಕುತ್ತಿದೆ. ಆಧುನಿಕತೆಯ ಮೊದಲ ಬಲಿಪಶು ದಲಿತರೇ ಆಗಿದ್ದಾರೆ. ಆದರೆ ಆಧುನಿಕತೆಯ ನಾಗರೀಕತೆಯನ್ನು ವಿರೋಧಿಸುವ ಕಾರಣಕ್ಕೆ ಗಾಂಧಿ ಅಸ್ಪೃಶ್ಯರಾದದ್ದು ವಿಪರ್ಯಾಸದ ಸಂಗತಿ. ಈ ಅರ್ಥದಲ್ಲಿ ಆಧುನಿಕತೆಯ ಮುಖಾಮುಖಿ ದೃಷ್ಟಿಯಲ್ಲಿ ದಲಿತರ ನಿಜವಾದ ಪ್ರತಿನಿಧಿ ಗಾಂಧಿಯೇ ಹೊರತು ಅಂಬೇಡ್ಕರ್ ಅಲ್ಲ. ದಲಿತರಲ್ಲಿ ಜಾತೀವಾದ ಬೆಳೆಯಲು ಗಾಂಧಿಯನ್ನು ಕಡೆಗಣಿಸಿದ್ದು ಕಾರಣವಾಗಿದೆ.

– ಪ್ರೋ?ಹೆಚ್.ಗೋವಿಂದಯ್ಯ

****


ಆಧುನಿಕತೆಯನ್ನು ಮಹಿಳೆ ಒಪ್ಪಿಕೊಂಡಿದ್ದಾಳೊ ಅಥವಾ ಹೇರಲಾಗಿದೆಯೊ ಎಂಬ ಪ್ರಶ್ನೆಯು ಪ್ರಸ್ತುತ. ಆಧುನಿಕತೆ ಮಹಿಳೆಯರ ಅವಶ್ಯಕತೆಗಳಿಗೆ ತಕ್ಕ ಬದಲಾವಣೆ ಆಗದೆ ಅದರ ಆವಿಷ್ಕಾರಗಳಿಗೆ ತಕ್ಕ ಬದಲಾವಣೆ ಮಹಿಳೆ ಎನ್ನುವ ಸತ್ಯ ಅರಿವಾಗಲು ಬಹಳ ಕಾಲ ಬೇಕಾಗಲಿಲ್ಲ. ಹೆಣ್ಣನ್ನು ಭೂಮಿಯಿಂದಲೇ ವಿಮೋಚನೆಗೊಳಿಸುವ ಕ್ರೌರ್ಯವನ್ನು ಪೋಷಿಸುವ ಬೆಳವಣಿಗೆ ಅಕ್ಷರಸ್ಥರ ವಲಯದಲ್ಲೇ ನಡೆಯುತ್ತಿದೆ.

–ಡಾ. ಸಬಿತ ಬನ್ನಾಡಿ

****

ಹೊಸ ಮನುಷ್ಯ ಸಾಬಾರ.

ಜನಪದ ನಿಲಯದ ಅಂತರಂಗದಲ್ಲಿ – ೧೨೮



ಕಳೆದ ಅಕ್ಟೋಬರ್ ೨೮, ೨೦೧೪ ನನ್ನ ಜೀವನದ ೮೦ ವರ್ಷಗಳನ್ನು ಮುಗಿಸಿ ೮೧ನೇ ವರ್ಷಕ್ಕೆ ಕಾಲಿಟ್ಟ ದಿನ. ಆ ದಿನವೇನೂ ನನಗೆ ವಿಶೇಷವಾಗಿ ಕಾಣಲಿಲ್ಲ. ಎಂದಿನಂತೆ ಸೂರ್ಯ ತನ್ನ ಸಮಯಕ್ಕನುಸಾರ ಉದಯಿಸಿದ, ಹಕ್ಕಿಪಕ್ಕಿಗಳು ತಮ್ಮ ಗೂಡುಗಳಿಂದ ಹಾರಿದವು. ತೋಟದಲ್ಲಿಯ ಗಿಡಗಳಲ್ಲಿ ಹೂವುಗಳು ಅರಳಿದವು. ಮೆಲುವಾಗಿ ಗಾಳಿ ಬೀಸುತ್ತಿತ್ತು. ಕೋತಿಗಳು ತಮ್ಮ ಚೆಲ್ಲಾಟವಾಡುತ್ತಿದ್ದವು. ರೈತರು ತಮ್ಮ ದನ ಕರುಗಳೊಂದಿಗೆ ಹೊಲಕ್ಕೆ ಹೊರಟಿದ್ದರು. ಶಾಲಾ ಮಕ್ಕಳು ಪುಸ್ತಕದ ಗಂಟನ್ನು ಹೊತ್ತುಕೊಂಡು ನಡೆದಿದ್ದರು. ಬೇರೆಲ್ಲ ಜನರು ತಮ್ಮ ತಮ್ಮ ಉದ್ಯೋಗಗಳಲ್ಲಿ ತೊಡಗಿದ್ದರು. ಹೀಗೆ ಎಲ್ಲ ಚಟುವಟಿಕೆಗಳು ಎಂದಿನಂತೆ ಸಾಗುತ್ತಿದ್ದವು. ನನಗೂ ಸಹ ನಾಳೆಯ ದಿನ ನನ್ನ ಜನ್ಮದಿನವೆಂಬುದು ಮರೆತು ಹೋಗಿತ್ತು. ಆದರೆ ೨೮ನೆಯ ತಾರೀಕು ಮಂಡ್ಯದಲ್ಲಿ ಒಪ್ಪಿಕೊಂಡಿದ್ದ ಕಾರ್ಯಕ್ರಮ ನೆನಪಾಯಿತು. ಮಂಡ್ಯದ ಶಂಕರಗೌಡ ಬಿ.ಎಡ್. ಕಾಲೇಜಿನಲ್ಲಿ ಏರ್ಪಾಡಾಗಿದ್ದ "ಗಾಂಧಿ ವಿಚಾರದ ಪ್ರಸ್ತುತತೆ" ಕುರಿತ ವಿಚಾರ ಗೋಷ್ಠಿಯನ್ನು ಉದ್ಘಾಟನೆ ಮಾಡುವ ಕಾರ್ಯಕ್ರಮ ಅದಾಗಿತ್ತು. ರಾತ್ರಿ ಆ ಕಾರ್ಯಕ್ರಮ ನೆನಪಾಗಿ ನನಗೆ ಸಂತೋಷವಾಯಿತು. ಜನ್ಮದಿನದಂದೆ ಯುವ ವಿದ್ಯಾರ್ಥಿಗಳ ಮಧ್ಯೆ ಕಾಲಕಳೆಯುವಂಥ ಅವಕಾಶ ಅದಾಗಿತ್ತು. ಅಲ್ಲದೆ ನನ್ನ ವಿಚಾರ ಶಕ್ತಿ ಬೆಳೆದಾಗಿನಿಂದ ಇದುವರೆಗೆ ೭೦ ವರ್ಷಗಳ ಕಾಲ ಕೈ ಹಿಡಿದು ನಡೆಸಿದ ಗಾಂಧಿ ವಿಚಾರಕ್ಕೆ ಸಂಬಂಧಿಸಿದ ಕಾರ್ಯಕ್ರಮವನ್ನೇ ಉದ್ಘಾಟನೆ ಮಾಡಿ ಭಾಗವಹಿಸುವ ಅವಕಾಶ ತಾನೇ ತಾನಾಗಿ ದೊರೆತದ್ದನ್ನು ನೆನೆದು ಆಶ್ಚರ್ಯವೂ, ಸಂತೋಷವೂ ಆಯಿತು. ನನ್ನ ಜನ್ಮದಿನದ ವಿಷಯ ಮನೆಯವರಿಗೆ ತಿಳಿಸಿದೆ. ಮೂರು ವರ್ಷದ ಮೊಮ್ಮಗನಾದ ಸಮೀಪ ಬಿಸ್ಕತ್ತು ಕೊಟ್ಟು ಶುಭಾಶಯ ಹೇಳಿದ. ಆರು ವರ್ಷದ ಗೌರಿ ಮತ್ತು ದತ್ತು ಕೇಂದ್ರದ ಆಕಾಶ, ವರ್ಷಿತಾ, ಶಿಲ್ಪ, ಚಿಂಟು ಮಕ್ಕಳೆಲ್ಲಾ ಸೇರಿ "Happy Birthday To You" ಎಂದು ಹೇಳುತ್ತಾ ಕೇಕೇ ಹಾಕುತ್ತಾ ಬಹಳ ಹೊತ್ತು ಕುಣಿದಾಡಿದರು. ಗಿರಿಜಮ್ಮನವರು ಸಿಹಿ ಸಜ್ಜಿಗೆ ಮಾಡಲು ಮರೆಯಲಿಲ್ಲ. ಕಾಲೇಜಿನ ಕಾರ್ಯಕ್ರಮಕ್ಕಾಗಿ ಮಂಡ್ಯಕ್ಕೆ ಹೋದೆ. ಕಾಲೇಜಿನ

ಕಾರ್ಯಕ್ರಮದಲ್ಲಿ ನನ್ನ ವಿಚಾರಗಳನ್ನು ಮಂಡಿಸುತ್ತಾ " ನಿಮ್ಮೆಲ್ಲ ಯುವಕರ ಮಧ್ಯೆ ಜನ್ಮದಿನವನ್ನು ಆಚರಿಸಲು ಸಂತೋಷವಾಗುತ್ತಿದೆ ಎಂದು ಹೇಳಿದೆ. " ಇಡೀ ಸಭೆ ಕರತಾಡನ ಮಾಡಿತು ಮತ್ತು ನನಗೆ ಶುಭಕೋರಿತು. ಸಭೆ ಮುಗಿಯುವ ಹೊತ್ತಿಗೆ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ. ಉಮಾದೇವಿ ಸಿಹಿ ತರಿಸಿ ಎಲ್ಲರಿಗೂ ಅದನ್ನು ಹಂಚಿಸುವ ಕೆಲಸ ಮಾಡಿದರು. ಈ ರೀತಿಯಾಗಿ ನನ್ನ ಜನ್ಮದಿನ ಸಾರ್ವಜನಿಕ ಬಂಧುಗಳ ಮಧ್ಯೆ ಕಳೆಯಿತು. ಆ ಬಗ್ಗೆ ನನಗೆ ಹೆಮ್ಮೆ ಎನಿಸುತ್ತದೆ. ಎರಡು ದಿನಗಳ ತರುವಾಯ ಅಕ್ಟೋಬರ್ ೩೧ನೆಯ ತಾರೀಖು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ನಡೆದ ಸರ್ದಾರ್ ವಲ್ಲಭಬಾಯಿ ಪಟೇಲ್ ಜನ್ಮದಿನದ ನೆನಪಿನಲ್ಲಿ ಆಯೋಜಿಸಲಾಗಿದ್ದ ' ಏಕತಾ ದಿವಸ ' ದ ಕಾರ್ಯಕ್ರಮದಲ್ಲಿ ಭಾಗವಹಿಸುವ ಅವಕಾಶ ಸಿಕ್ಕಿತ್ತು. ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಎಲ್ಲರೂ ನನಗೆ ಶುಭಾಶಯ ಕೋರಿದರು. ನನಗೆ ೮೦ ವರ್ಷ ತುಂಬುತ್ತಿರುವ ಸಂದರ್ಭದಲ್ಲಿಯೇ ಗಾಂಧೀಜಿಯವರ ಸಾರ್ವಜನಿಕ ಕೆಲಸದಲ್ಲಿ, ಮುಖ್ಯವಾಗಿ ಖಾದಿ ಕೆಲಸದಲ್ಲಿ ಸಹಾಯಮಾಡಿದ್ದ ಜಮ್ನಾಲಾಲ್ ಬಜಾಜ್ ಅವರ ಹೆಸರಿನಲ್ಲಿ ಸ್ಥಾಪಿತಗೊಂಡಿರುವ ರಾಷ್ಟ್ರೀಯ ಪ್ರಶಸ್ತಿ ೨೦೧೪ರ ಸಾಲಿಗೆ ನನಗೆ ತಾನಾಗಿ ಒದಗಿ ಬಂದಿತು. ಇದುವರೆಗೆ ಐದು ಲಕ್ಷ ರೂಪಾಯಿ ಮೌಲ್ಯದ ಬಜಾಜ್ ಪ್ರಶಸ್ತಿ ನನಗೆ ಪ್ರದಾನವಾಗುವ ವೇಳೆಗೆ ಹತ್ತು ಲಕ್ಷ ಮೌಲ್ಯಕ್ಕೆ ಏರಿತು. ಇದೊಂದು ದೈವದ ಕೈವಾಡವೇ ಸರಿ. ಇಂಥ ದೊಡ್ಡ ಮೊತ್ತದ ಪ್ರಶಸ್ತಿಯೊಂದು ಜೀವನದ ಸಂಧ್ಯಾ ಕಾಲದಲ್ಲಿ ದೊರೆತದ್ದು ತಂದೆ-ತಾಯಿಯವರಾದ ವೆಂಕಟೇಶ್-ಪದ್ಮಾವತಿ ಅವರ ಆಶೀರ್ವಾದ ಮತ್ತು ಜೀವನದಲ್ಲಿ ವೈಚಾರಿಕವಾಗಿ ಶಕ್ತಿ ತುಂಬಿದ - ವಿನೋಬಾ - ಜಯಪ್ರಕಾಶ್ ನಾರಾಯಣ್ ರವರ ಆಶೀರ್ವಾದ ಕೂಡ. ಪ್ರಶಸ್ತಿ ಪ್ರದಾನ ದೇಶದ ಅನೇಕ ಗಣ್ಯರ ಸಮ್ಮುಖದಲ್ಲಿ ಮತ್ತು ಉಪಸ್ಥಿತಿಯಲ್ಲಿ ಮುಂಬಯಿಯಲ್ಲಿ ನೊಬೆಲ್ ಪಾರಿತೋಷಕ ಪುರಸ್ಕೃತ ಕೈಲಾಶ್ ಸತ್ಯಾರ್ಥಿ ಅವರ ಹಸ್ತ ಜಮ್ನಾಲಾಲ್ ಬಜಾಜ್ ಪ್ರಶಸ್ತಿ ದೊರೆತದ್ದು ವಿಶೇಷ ಸಂಗತಿಯಾಗಿದೆ. ಇದೆಲ್ಲವೂ ಫಲಾಪೇಕ್ಷೆಯಿಲ್ಲದೆ ಗಾಂಧೀಜಿಯವರ ವಿಚಾರಕ್ಕನುಗುಣವಾಗಿ ಮಾಡಿದ ಸಾರ್ವಜನಿಕ ಸೇವೆಯ ಫಲ. ನನ್ನ ಮುಂದಿರುವ ಅಲ್ಪ ಆಯುಷ್ಯ ಕ್ರಿಯಾತ್ಮಕವಾಗಿ ಕಳೆಯಲಿ ಧೀಶಕ್ತಿ ಕೊನೆಯವರೆಗೆ ಉಳಿಯಲಿ, ಸಮಾಜದ ಪ್ರೀತಿ ವಿಶ್ವಾಸ ಜೀವನಾಂತ್ಯದ ವರೆಗೆ ದೊರೆಯಲಿ. ಮಕ್ಕಳು-ಮೊಮ್ಮಕ್ಕಳು-ಮುಂದಿನ ಸಂತತಿ ಈ ಪರಂಪರೆಯನ್ನು ಮುನ್ನಡೆಸಿಕೊಂಡು ಬರುವಂತಾಗಲಿ ಎಂದು "ಶ್ರೀ ವಿಶ್ವಾದಿ ಮೂಲ ಮಾಯಾಲೋಲ ದೇವ ಸರ್ವೇಶ ಪರಬೊಮ್ಮನೆಂದು ಆವುದನು ಜನ ನಂಬಿಹುದೊ ಆ ವಿಚಿತ್ರಕೆ ನಮಿಸುತ್ತಾ ಹಾರೈಸುತ್ತೇನೆ ".

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀಮತಿ. ನಾಗಮಣಿ ಎಸ್.ರಾವ್ – ಬೆಂಗಳೂರು
ಶ್ರೀ. ಶುಭೋದಯ ಕೂಡ್ಲು, ಡಾ.ಎ.ವೆಂಕಟೇಶ್,
ಶ್ರೀ.ಕೆ.ಯಶವಂತ್, – ಮಂಗಳೂರು
ಶ್ರೀ. ದಿಲೀಪ್‌ಕುಮಾರ್ – ಮರಡಿಹಳ್ಳಿ.

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ತಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ ಅಂಚೆ

KA / SK / MND / 470 / 2012-2014
Regd. no. KAR / KAN / 2000 / 3820



ಶ್ರೀಮತಿ/ ಶ್ರೀ...

349 ಶ್ರೀ.ಹೆಚ್.ಎಂ.ನಾಗರಾಜರಾವ್
#278, "ನೆರಳು"
5ನೇ ಮುಖ್ಯರಸ್ತೆ, 'ಹೆಚ್'ಬ್ಲಾಕ್
ರಾಮಕೃಷ್ಣನಗರ.
ಮೈಸೂರು – 570023

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust
Melkote, Dist- Mandya - 571431. Phone : 08236 316344/ 299854
e-mail : janapada@yahoo.com - Web : janapada.net
Printed at Sanketh Mudrna, Melkote